
# ಅಂತರಂಗದ ಆಪ್ತಸ್ವರ ಮನಸಿನ ಮರ್ಮರವಾದಾಗ

**ಕವನ ಸಂಕಲನ ‘ಅಂತರಂಗದ ಆಪ್ತಸ್ವರ’**

**ಬ್ಲಾಗ್ ‘ಮನಸಿನ ಮರ್ಮರ’ದ**

Some-ಕವನಗಳು... ಸಂಚಲನಗಳು




---

ಒಡೆದ ಕೊಳಲು ಹೊಮ್ಮಿಸುವುದೇ

ನಿನಾದ ಮುರಳಿಗಾನ

ಹರಿದ ನೂಪುರ ಕಿಂಕಿಣಿಸುವುದೇ

ಕುಣಿದ ಹೆಜ್ಜೆಯ ತಿಲ್ಲಾನ

ಕಪ್ಪಾದ ಮುಗಿಲ ಕಂಡರಲ್ಲವೇ

ಹಿಗ್ಗಿದ ನವಿಲ ನರ್ತನ

ಬರೆದ ಸಾಲು ಹೇಳಬಹುದೇ

ಕಾವ್ಯದ ಮನಸಿನ ತಲ್ಲಣ

---

ಭಾವ ಬಿಂದಿಗೆಯಲಿ ತುಂಬಿಟ್ಟ

ನಿನ್ನ ನೆನಪುಗಳು

ಸೋರಿ ಹೋಗುತಿವೆ ಸದ್ದಿಲ್ಲದಂತೆ...

ಒಮ್ಮೆ ಕಣ್ಣ ಹನಿಗಳಾಗಿ...

ಒಮ್ಮೊಮ್ಮೆ ಹನಿ ಕವಿತೆಗಳಾಗಿ

---

ಬರೆಯಕೂಡದು ಅಂದುಕೊಂಡರೂ

ಬರೆಸಿಕೊಳ್ಳುವ ಕವಿತೆಗಳೇ ಹೀಗೆ..

ಎಷ್ಟು ಮರೆಯಬೇಕೆಂದುಕೊಂಡರೂ

ಆವರಿಸಿಕೊಳ್ಳುವ ನಿನ್ನ ನೆನಪಿನ ಹಾಗೆ..!!

---

ನನ್ನೆದೆಯ ಕೊಳದೊಳಗೆ

ಜಿನುಗೋ ನಿನ್ನ ನೆನಪುಗಳಿಂದ

ಹರಿಯುತಿಹುದು ಭಾವದೊಂದು

ಬತ್ತದಾ ತೊರೆ...

ಒಮ್ಮೊಮ್ಮೆ ನೆನಪುಗಳ

ಮಹಾಪೂರ ಬಂದಾಗ,

ಕಣ್ಣ ಕೊಳ ತುಂಬಿ

ಅತ್ತಿದ್ದೂ ಖರೇ..!!

---

ಮನಸಿನ ಗ್ರಂಥಿಗೆ ಅಂಗಡಿಯೊಳಗೆ

ನಿನ್ನ ನೆನಪುಗಳ ಸುವಾಸನೆ

ಕನಸಿನ ಕನ್ನಡಿಯೊಳಗೆ

ನಿನ್ನ ಪ್ರತಿ-ಬಿಂಬದ ಆವಾಹನೆ

---

ನಾ ಕವಿ ಅಲ್ಲವೇ ಅಲ್ಲ ಗೆಳತಿ

ಎಲ್ಲಾ ಕೃತಿಚೌರ್ಯ...

ನಿನ್ನ ಕಂಗಳಿಂದ ಹೆಕ್ಕಿದ ಪ್ರೀತಿಯ ಸಾಲುಗಳೇ

ನನ್ನ ಕಾವ್ಯ !!

---

ನೀನಿಲ್ಲದ ಬದುಕೂ

ಒಂದು ಬದುಕೇನಾ?

ನಿನ್ನ ನೆನಪೂ ಮುಗಿದ ಮೇಲೆ

ಬದುಕೆ ನಾ !!

---

ಪ್ರಶ್ನೆಗಳು ಪ್ರಶ್ನೆಗಳಾಗಿಯೇ

ಬದುಕಿರಲಿ ಬಿಡು ಗೆಳತಿ

ಸುಳ್ಳು ಸಮರ್ಥನೆಗಳ ನೆಪದಲಿ

ಅವುಗಳ ಉತ್ತರ ಕ್ರಿಯೆ

ಆಗೋದು ಬೇಡ

---

ಎಷ್ಟು ಕೂಡಿ ಕಳೆದರೂ

ತಾಳೆಯಾಗದ ಈ ಗಣಿತವೇ ಹೀಗೆ

ಎಷ್ಟು ಕೂಡಿ ಕಲೆತರೂ

ಅರ್ಥವಾಗದ ವನಿತೆಯ ಹಾಗೆ !!

---

ಪರೀಕ್ಷೆಯಲಿ ಬಿಟ್ಟ ಸ್ಥಳ ತುಂಬೋದು

ಎಷ್ಟು ಸುಲಭ ಅನ್ನಿಸುತ್ತಿತ್ತು

ಅದರ ಕಷ್ಟ ಗೊತ್ತಾಗಿದ್ದು

ನೀ ಬಿಟ್ಟು ಹೋದ ಮೇಲೇನೇ !!

---

ಬಾಳಿನ ಪುಟದ ಸಾಲಿನಲಿ ನೀ

ಅಲ್ಪ ವಿರಾಮದಂತೆ ಬಂದೆ,

ಆಶ್ಚರ್ಯ ಚಿನ್ಹೆಯಂತೆ

ಎದ್ದು ಹೊರಟು ಹೋದೆ!

ಪೂರ್ಣ ವಿರಾಮ ಹೇಗೆ ಅನ್ನೋದಷ್ಟೇ

ಈಗ ಉಳಿದಿರುವ ಪ್ರಶ್ನೆ

---

ನೀ ಬಳಿಯಲಿರಲು ಗೆಳತಿ

ಈ ಬದುಕಲಿ ಅಷ್ಟೇ ಸಾಕು

ನೀ ದೂರವಾದರೆ…

ಈ ಬದುಕು ಸಾಕು ಅಷ್ಟೇ..!!

---

ನಿನ್ನ ಮರೆಯಬೇಕೆಂಬ

ಮನಸಿನ ಮನವಿಯ

ಮನ್ನಿಸಿ ನಾ ಮರೆತೇಬಿಟ್ಟೆ

ಮರು ಘಳಿಗೆಯಲೇ

ಮಧುರ ನೆನಪುಗಳ

ಆಲಾಪವ ಆಲಿಸುತ

ಮೈ ಮರೆತೇಬಿಟ್ಟೆ

---

ಬದುಕಿನ ಕವನ ಸಂಕಲನದಲಿ

ನೀನೊಂದು ಪುಟ್ಟ ಕವಿತೆ

ಬಾಳಿನ ಭಾವಗೀತೆಯಲಿ ನೀ

ಸ್ವರವಾಗಿ ಕುಳಿತೆ

ಪ್ರೇಮದ ಪಿಸುಮಾತಲಿ ನೀ

ಪದವಾಗಿ ಅವಿತೆ

ಬರುವೆಯ ನನ್ನ ತಮದ ಬಾಳಿಗೆ

ನೀನಾಗಿ ಒಂದು ಪುಟ್ಟ ಹಣತೆ?

---

ಚಿತ್ತ ಭಿತ್ತಿಯ ನಡುವೆ

ಕನಸುಗಳ ಕೋಣೆಯಲಿ

ನಿನ್ನ ನೆನಪುಗಳ

ಚಾದರವ ಬಿಚ್ಚಿಟ್ಟಿರುವೆ

ಮಧುರ ಸ್ಮೃತಿಗಳ

ಸುಂದರ ಮೆಲ್ಹಾಸಿನಡಿಯಲಿ

ಕಣ್ಣೀರ ಕರೆಗಳನೆಲ್ಲ

ಬಚ್ಚಿಟ್ಟಿರುವೆ

---

ಮರೆತೂ ಕೂಡ

ಕಾಲಿಡಬೇಡ ಗೆಳತಿ

ನನ್ನೆದೆಯ ಅಂಗಳದಲಿ

ಹಾಳಾದೀತು

ಎಂದೋ ನೀನೇ ಬಿಡಿಸಿಟ್ಟ

ಒಲವಿನ ರಂಗವಲ್ಲಿ

---

ಭಾವ ಬಿಂದಿಗೆಯ ತುಂಬೆಲ್ಲಾ

ನಿನ್ನೊಲವಿನ ತಿಳಿ ನೀರು

ಸ್ಪೂರ್ತಿ ಪಾತ್ರೆಯಲೂ

ಗೆಳತಿ ಭರ್ತಿ ನೀನೇ ನೀನು

ಕಣ್ಮುಚ್ಚಿಕೊಂಡರೆ

ಕನಸಲಿ ಬರ್ತಿ ನೀನು

ಕಣ್ತುಂಬಿ ಬಂದಾಗ ಕಣ್ಣಂಚಿನ

ಹನಿಯಲೂ ಇರ್ತಿ ನೀನು

---

ತಣ್ಣಗಿದ್ದರೂ ಒಳಗೊಳಗೇ ದಹಿಸಿ

ಕೊರೆವ ಮಂಜಿನಂತೆ…

ನಿನ್ನ ತಂಪು ನೆನಪೂ

ನನ್ನ ಸುಡುತಿದೆ ಬೆಂಕಿಯಂತೆ

---

ಕವಿತೆ ಅನ್ನುವರೇನು ಸಖಿ

ಪೋಣಿಸಿದ ಪದಗಳ ಸಾಲಿಗೆ?

ಕವಿತೆಯ ಅರ್ಥವೇ ಬೇರೆ ಇದೆ

ಗೆಳತಿ ನನ್ನ ಪಾಲಿಗೆ

ಅದು...

ಮುರಿದು ಹೋದ ಕನಸೊಂದರ ತುಣುಕು

ಮುಗಿದು ಹೋದ ಕ್ಷಣವೊಂದರ ಮೆಲುಕು

ಮರೆಯಲಾಗದ ನಿನ್ನೊಂದು ಮಧುರ ನೆನಪು

---

ಕನಸಿನ ಕನ್ನಡಿಯ ಬಿಂಬಗಳೆಲ್ಲಾ

ಮನಸಿನೊಳಗೆಯೇ ಬೆತ್ತಲಾಯ್ತು

ನಿನ್ನ ಕಣ್-ಬೆಳಕಿಗೆ ಬೀಳುವ ಮೊದಲೇ

ಮರೆಯಾಗಿ ಕತ್ತಲಾಯ್ತು

---

ನನ್ನ ಯಾತನೆಗಳನೆಲ್ಲ

ನಿನ್ನ ಬಳಿ ಹೇಳಿಕೊಂಡು

ಹಗುರಾಗೋಣವೆಂದಿದ್ದೆ..

ಹ್ಮ್.. ಹಗುರವಾಗಿಬಿಟ್ಟೆ ನೋಡು !!

---

ಮನಸಿನ ಪುಟಗಳ ನಡುವೆ

ಖಾಲಿ ಹಾಳೆಗಳಿವೆ ಕೆಲವು

ನೀ ಬರೆಯದೇ ಹೋದ

ಒಲವಿನ ಸಾಲುಗಳವು

---

ಬೇಡಿಕೊಂಡರೂ ಎಷ್ಟೋ ಕಾಡಿ ಬೇಡಿ

ನೀ ನಡೆದೆ ನನ್ನೆದೆ ಕೊಳವ ರಾಡಿ ಮಾಡಿ

ಹೊರಹೊಮ್ಮಿಸುತಿಹೆ ಎನ್ನ ಎದೆಯಾಳದ ತುಮಲ

ಅರಳುತಿವೆ ಪ್ರೀತಿ ಹೆ(ಕೆ)ಸರಲ್ಲಿಯೂ ಕವಿತೆಗಳ ಕಮಲ :-)

---

ಇದು ಲಾರ್ಡ್ ಟೆನಿಸನ್‌ನ 'ಹೋಮ್ ದೆ ಬ್ರಾಟ್ ಹರ್ ವಾರಿಯರ್ ಡೆಡ್'ನ ಭಾವಾನುವಾದ. ಈ ಪದ್ಯ ನಮಗೆ 10ನೇ ಕ್ಲಾಸಿನ ಇಂಗ್ಲೀಷ್ ಪಠ್ಯದ ಭಾಗವಾಗಿತ್ತು. ಈ ಪದ್ಯ ಅದರ ಭಾವ ತೀವ್ರತೆಯಿಂದಾಗಿ ನನ್ನನ್ನು ಗಾಢವಾಗಿ ತಟ್ಟಿತ್ತು. ಅದನ್ನು ಕನ್ನಡದಲ್ಲಿ ಬರೆಯುವ ಪ್ರಯತ್ನ ನನ್ನದು. ಅದರ ಮೂಲದ ತೀವ್ರತೆಯ ನೂರರಲ್ಲೊಂದು ಭಾಗ ಇಲ್ಲಿ ಬಂದಿದ್ದರೂ ನನ್ನ ಪ್ರಯತ್ನ ಸಾರ್ಥಕ

ಹೆಮ್ಮೆಯ ವೀರಯೋಧ ಆಕೆಯ ಪತಿ,

ಯುದ್ಧದಲಿ ಮಡಿದ ಅವನೀಗ ಬರೀ ಸ್ಮೃತಿ.

ಯೋಧನ ಶವವೀಗ ಮನೆಯ ಮುಂದಿದೆ,

ಅವಳ ಬಾಳ ಜ್ಯೋತಿಯೀಗ ನಂದಿದೆ.

ಅಳುವುದನೂ ಮರೆತಂತೆ ಕುಸಿದು ಕುಳಿತಿಹಳು,

ನಿರ್ಜೀವ ಭಾವ ಹೊರಸೂಸುವ ಕಂಗಳು.

ಶೋಕಭಾರಕೆ ಮೂಕಳಾಗಿಹ ಇವಳು,

ಅಳದಿದ್ದರೆ ಖಂಡಿತ ಬದುಕಿ ಉಳಿಯಳು.

ಕಣ್ಣೀರ ಬರಿಸಲೆಂದೇ ಅವನ ಹಾಡಿ ಹೊಗಳಿದರು,

ಬಣ್ಣಿಸುತಾ ಅವನ ಶೌರ್ಯ ಸಾಹಸದ ಕತೆಗಳು.

ಕೇಳುತಾ ಕುಳಿತಳು ಅವಳು ಶಿಲೆಯಂತೆ,

ಈ ಲೋಕದಾ ಪರಿವೆಯೇ ಇಲ್ಲದವಳಂತೆ.

ಸ್ನೇಹಿತೆಯೊಬ್ಬಳು ಅವಳ ಕೈಹಿಡಿದು ಕರೆತಂದು,

ಯೋಧನ ಶವದ ಬಳಿಸಾರಿ ನಿಂದು.

ಮುಖವ ತೋರಿಸಿದಳು ಸರಿಸಿ ಬಿಳಿಬಟ್ಟೆ,

ಆದರೂ ಒಡೆಯಲಿಲ್ಲ ಅವಳ ದುಃಖದ ಕಟ್ಟೆ.

ಅಷ್ಟರಲಿ ಅಲ್ಲಿದ್ದ ವೃದ್ಧೆಯೊಬ್ಬಳು,

ಅಳುವ ಮಗುವ ತಂದು ಮಡಿಲಲಿಟ್ಟಳು.

ಉಕ್ಕಿ ಹರಿಯಿತು ಕಣ್ಣೀರು ಜಲಪಾತವಾಗಿ,

ಮುದ್ದು ಕಂದಾ ನಾ ಬದುಕಬೇಕು ಖಂಡಿತಾ ನಿನಗಾಗಿ.... !!

---

ಮುಂದೊಂದು ದಿನ ಕನ್ನಡ ಕವಿತೆ ಹೀಗಿರಬಹುದೇನೋ... ☺

ನಾನೆಷ್ಟು ಪೋಸ್ಟಿದರು ನೀ ಕಮೆಂಟಲೇ ಇಲ್ಲ

ನಾನೆಷ್ಟು ಬ್ಲಾಗಿದರೂ ನೀ ಬಾಗ್ಲು ತೆಗಿಲಿಲ್ಲ

ನಾನೆಷ್ಟು ಪಿಂಗಿದರೂ ನೀ ಪಿಂಗ್-ಬ್ಯಾಕಲೆ ಇಲ್ಲ

ನಾನೆಷ್ಟು ಪೋಕಿದರೂ ನೀ ನೀಕಲೆ ಇಲ್ಲ

ನಾನೆಷ್ಟು ಟ್ವೀಟಿದರೂ ನೀ ಚಾಟಲೆ ಇಲ್ಲ

ನಾನೆಷ್ಟು ಮೆಯ್ಲಿದರೂ ನೀ ರಿಪ್ಲೈಸಲೇ ಇಲ್ಲ

ನಾನೆಷ್ಟು ಕಾಲಿದರೂ ನೀ ಪಿಕ್ಕಲೆ ಇಲ್ಲ

ನಾನೆಷ್ಟು ಎಸ್ಸೇಮೆಸ್ಸಿದರೂ ನಿನ್ನ ಮೆಸ್ಸೇಜೆ ಇಲ್ಲ

ಹುಡುಗಿ ನಿನ್ನ ಹುಡುಕಿ(ಸರ್ಚಿ) ನಾ ಅಲೆಯದ ಸೈಟುಗಳೇ ಇಲ್ಲ

ಆರ್ಕುಟ್, ಫೇಸ್ಬುಕ್,ಟ್ವೀಟರ್,ಗೂಗಲ್ ಪ್ಲಸ್ಸಿನಲಿ ನೀ ಸಿಗಲಿಲ್ಲ

ಅಕೌಂಟ್ ಓಪನ್ ಆಗ್ಲೇ ಒಂದ್ ವೀಕೂ ಆಗಲಿಲ್ಲ

ನನ್ನ ಹಾರ್ಟಿನ ನೆಟ್ವರ್ಕ್ನಿಂದ ಆಗ್ಲೇ ಲಾಗೌಟ್ ಆದೆಯಲ್ಲ ☺

---

ಲೈಕು ಲೈಕೆಂದು ಸುಮ್-ಸುಮ್ಮನೆ ಲೈಕದಿರಿ...

ಓದಲು ಲಾಯಕ್ಕಿದ್ದರೆ ಮಾತ್ರ ಲೈಕಿರಿ

ಲಾಯಕ್ಕಿಲ್ಲದ್ದನ್ನೂ ಲೈಕಿದರೆ...ನರಕದಲಿ ಕುದುರೆ ಲಾಯಕಾಯೋ ಕೆಲಸವಂತೆ...ಬ್ಲಾಗಜ್ಞ :-) :-)

---

ನಿನ್ನ ನೆನಪುಗಳಿಂದ

ನನ್ನಲಿ ಮೂಡಿದ ಸಂಚಲನಗಳ ಸಂಕಲಿಸಿ

ಕವಿತೆ ಎಂದು ಹೆಸರಿಟ್ಟೆ...

ನಿಟ್ಟುಸಿರಿಟ್ಟೆ !!

---

ಈ ಹನಿಗಳೆಲ್ಲ ನನ್ನವಲ್ಲ ಗೆಳತಿ

ನೀನೇ ಬರೆಸಿದ್ದು... ಬರಿಸಿದ್ದು

ನಾನೋ.. ಬರಿ ನೆಪಮಾತ್ರದವ

ಕೇವಲ ಬರೆದಿದ್ದು ಮತ್ತು ಭರಿಸಿದ್ದು !!

---

ನಾನೇ ಬಯಸಿ ಪಡೆದರೆ ಅದು

ದಿವ್ಯ ಏಕಾಂತ...

ನೀನಿಲ್ಲದ ಒಂಟಿತನದಲಿ ಅನಿಸೋದು

ಈ ಬದುಕು ಏಕಂತ?

---

ಮಾಡಿಲ್ಲ ಕವನ ಪೂರ್ತಿ

ಎಲ್ಲಿ ಮರೆಯಾದೇ ನೀ ಸ್ಫೂರ್ತಿ

ಕನಸಲ್ಲಾದ್ರೂ ಒಂದು ಸರ್ತಿ

ಕಾಯ್ತೀನಿ ಬಾರೇ ಮಾರಾಯ್ತಿ

---

ಬರೆದು ಬರಿದಾಗಿಹೆನು ನಾ,

ಬರಿದೆ ನೆನಪಾಗುತಿಹೆ ನೀ,

ಬರದೆ ಹೋದರಿನ್ನು ನೀ,

ಬರದ ಬಯಲಂತೆ ನಾ

---

ಹಿಂದಿರುಗಿ ನೀ ಬರಲಾರೆಯೆಂದು

ನನಗೂ ಗೊತ್ತಿದೆ ಗೆಳತಿ

ಹಿಂದುರುಗಿ ನೋಡಿಬಿಡು ಸಾಕು

ಕಣ್ತುಂಬಿಕೊಳ್ಳುವೆ ಒಂದು ಸರ್ತಿ

---

ಪ್ರೀತಿ ಹಣತೆಗೆ ನೀನೆ ಎಣ್ಣೆ

ನಾ ಉರಿಯುವ ಬತ್ತಿ,

ಎಣ್ಣೆ ತೀರಿದರೂ ಉರಿಯುತಿದೆ

ನನ್ನೀ ದೇಹವೇ ಹೊತ್ತಿ...

ಅದೇ ಕಣೇ ಈ ಪ್ರೀತಿಯ ಶಕ್ತಿ

---

ಮಾತೇ ಇಲ್ಲದೆ ಮುಗಿದೇ ಹೋಯ್ತು

ನಮ್ಮ ಪ್ರೀತಿ ನಾಟಕದ ಏಕಾಂಕ,

ತೆರೆ ಸರಿಯುವ ಮೊದಲೇ ತೆರೆ ಬಿತ್ತು

ಉಳಿದಿದ್ದು ಬರೀ ಏಕಾಂತ

---

ಆಸೆಯೇನೋ ಇದೆ ಗೆಳತಿ ನಿನ್ನ ಮೇಲೆ

ಮುಗಿಲು ಮುಟ್ಟುವಷ್ಟು...

ಕೈಗೆಟುಕಬೇಕಲ್ಲ ಬಯಸಿದ್ದೆಲ್ಲ

ನನ್ನ ಪ್ರಾಪ್ತಿ ಎಷ್ಟೋ ಅಷ್ಟು

---

ಮುರಿದೇನೆ ಹೊರತು ಮಣಿಯಲಾರೆ

ಈ ಮುನಿಸು ಹಠ ನಿನಗೆ ತರವೇ ನೀರೆ?

ಮುರಿದೆರಡು ತುಂಡಾದ ಮೇಲೆ ಈ ನಂಟು

ಬದುಕಲಿ ನಮ್ಮ ಪಾಲಿಗೇನುಂಟು ?

ಜೋಡಿಸಬಹುದೇನೆ ಸುರಿದ್ಯಾವ ಅಂಟು?

---

ಬಾರದಿರು ಗೆಳತಿ ಮನಸಿನ ಕನಸಿನಂಗಳಕೆ ಆಡಲು

ಬರುವ ಮುನ್ನ ಹುಟ್ಟಿಸಿ ನಿರೀಕ್ಷೆಯ ಕಡಲು

ಬಳಿಕ ಹಿಂದಿರುಗಿ ಮರೀಚಿಕೆಯಂತೆ ಕಾಡಲು

ಸಾಕಿನ್ನು ಭರಿಸಲಾರದೀ ಒಡಲು

ಬರುವೆಯಾದರೆ ಬಾ ಇಲ್ಲೇ ಠಿಕಾಣಿ ಹೂಡಲು

ಮರಳುವ ಮಾತೇ ಇಲ್ಲದೆ ಕೂಡಲು..

ಎದೆಯ ಈ ಪುಟ್ಟ ಗೂಡೊಳು

---

ಸಣ್ಣಗೆ ಮಳೆ ಜಿನುಗುತ್ತಿತ್ತು

ತಣ್ಣಗೆ ನಿನ್ನ ನೆನಪಿನ ಸೋನೆಯಂತೆ

ತಂಪಾದ ನೆಲವು ಮಿದುವಾಗುತ್ತಿತ್ತು

ನಿನ್ನ ಒಲವುಕ್ಕಿ ಹರಿದ ಎದೆಯಂತೆ

ನಿನ್ನ ನೆನಪಿನ ಮಳೆಯಲಿ ನಿನ್ನೆ ನಾ ನೆನೆದು

ರಾತ್ರಿ ಪೂರ್ತಿ ಒದ್ದೆಮುದ್ದೆ

ಎದೆಯ ಬೆಚ್ಚನೆ ಕವಾಟದೊಳಗೆ ನಿನಗೆ

ಬಂತೇನೆ ಸುಖವಾಗಿ ನಿದ್ದೆ?

---

ದಾರಿ ಕವಲಾಗುವ ಮುನ್ನ ಜೊತೆಯಾಗಿ ನಡೆದೆವು

ಮೂಡಿಲ್ಲವೇನೆ ಹೆಜ್ಜೆ ಗುರುತು?

ಅರಸಿ ಅಲೆದು ದಾರಿ ತಪ್ಪಿರುವೆ ಎನ್ನರಸಿ

ಯಾರು ನೆರವಾದಾರು ನಿನ್ನ ಹೊರತು?

---

ಕುಡಿ ನೋಟದಲೆ

ಕುಡಿಯೊಡೆದ ಒಲವು ಕವಲಾಯಿತು;

ನೋಟ ಕಿಡಿಯಾಯಿತು..

ಕನಸು ಪುಡಿಯಾಯಿತು..

ಮನಸು ಒಡೆದ ಕನ್ನಡಿಯಾಯಿತು

---

ನನಸಾಗುವ ಮೊದಲೇ ಕೈಜಾರಿಹೋದ

ಅಪೂರ್ಣ ಕನಸಿನದೊಂದು  ಮೆಲುಕು...

ಹಸಿವೆ ತೀರುವ ಮುನ್ನವೇ ಮುಗಿದ

ಅನಾಥ ಕೂಸಿನ ಕೈಯ್ಯ ರೊಟ್ಟಿ ತುಣುಕು

---

ಹೆಜ್ಜೆ ಮೂಡದ ಹಾದಿಯಲ್ಲಿ

ನಿನ್ನ ಗೆಜ್ಜೆ ದನಿಯ ಕೇಳಲೆಂದೇ

ಹೊರಟಿರುವೆ ನಿನ್ನ ಅರಸಿ

ಲಜ್ಜೆ ಮರೆತು ಬಿಗುಮಾನ ತೊರೆದು

ಹೆಜ್ಜೆಯೊಂದಿಗೆ ಹೆಜ್ಜೆ ಹಾಕುತಾ

ಬರಲಾರೆಯಾ ಎನ್ನರಸಿ?

---

ಬೊಗಸೆ ಕಂಗಳ ಹುಡುಗಿ

ಮೊಗೆಮೊಗೆದು ಕೊಟ್ಟಳು

ಬೊಗಸೆ ತುಂಬಾ ಕನಸುಗಳ ಸುರಿದು..

ಭರವಸೆಯ ಪಾತ್ರೆಯಲಿ

ಕೂಡಿಟ್ಟ ಕನಸೆಲ್ಲ ಆವಿಯಾಗುತ್ತಿವೆ

ಕಣ್ಣಿಂದ ಹನಿಯಾಗಿ ಹರಿದು

---

ನಿನ್ನ ಬಿಟ್ಟು ನಾನಿರಲಾರೆ ಅಂದವಳು

ನನ್ನ ಬಿಟ್ಟು ಹೋಗುವಾಗ

ಬಿಟ್ಟು ಹೋದ ನೆನಪುಗಳೇ ಯಾಕೆ

ಬಿಟ್ಟೂ ಬಿಡದೆ ಕಾಡುತಾವೆ?

---

ಅಪಧಮನಿ, ಅಭಿಧಮನಿ

ನುಡಿಯುತಿವೆ ಸನಿಹ ಬಾ ನೀ

ಅಕ್ಷಿಪಟಲ ದ್ವಯಗಳು

ಕಾತರಿಸಿವೆ ನಿನ್ನ ಕಾಣಲು

ಹೃತ್ಕರ್ಣ-ಹೃತ್ಕುಕ್ಷಿಗಳು

ಇವೆ ನಿನ್ನ ನಿರೀಕ್ಷೆಯೊಳು

ಉಚ್ಛ್ವಾಸ-ನಿಶ್ವಾಸಗಳು

ನೀ ಬರುವ ವಿಶ್ವಾಸದೊಳು

ತನು-ಮನದಿ ಇಂತು ಬೇರುಬಿಟ್ಟು

ಹಾರಿಹೋದೆ ಎಂತು ನನ್ನ ಬಿಟ್ಟು?

---

ಓ ತರಳೆ... ನಿನ್ನ ಪ್ರೇಮ ಸುಳಿಗಾಳಿ

ನಾನದಕೆ ಸಿಕ್ಕಿಬಿದ್ದ ತರಗೆಲೆ...

ಎಲ್ಲಿಗೊಯ್ಯುವುದೋ ಅರಿಯೆ ನೆನಪಿನ ಚಕ್ರಸುಳಿ

ಇನ್ನೆಷ್ಟು ಹೊತ್ತು ತಿರುಗಲೇ?

---

ಕವಿತೆ ಬರೆಯಬೇಕೆಂದು

ನಾನೇನು ಬಯಸಿರಲಿಲ್ಲ

ನಿನ್ನ ಬಯಸಿದ ತಪ್ಪಿಗೆ

ಬರೆಯದೇ ವಿಧಿ ಇರಲಿಲ್ಲ

---

ಸಖಿ, ನಿನ್ನ ವಿಲಾಸಕೆ ಮನಸೋತು

ವಿಳಾಸವಿಲ್ಲದಂತಾದೆ

ನಿನ್ನ ಉಸಿರಲಿ ಉಸಿರಾದೆ ನೋಡು

ಹೇಳ ಹೆಸರೇ ಇಲ್ಲದಂತಾದೆ...!!

---

ನಿನ್ನ ಕಣ್ಣಲ್ಲರಳಿದ

ನಗೆಮಲ್ಲಿಗೆಯ ನರುಗಂಪಿಗೆ

ಮನದ ಮಾಮರದ

ಚಿಗುರೆಲೆಗೇಕೀ ಕಂಪನ?

---

ಗೆಳತಿ..ನೀನೊಂದು ಬರೆಯದೇ ಹೋದ

ಪ್ರೇಮ ಪತ್ರ...

ನಾನದರ ಪ್ರತೀಕ್ಷೆಯಲೇ ನಿರ್ಗಮಿಸಿದ

ದುರಂತ ಪಾತ್ರ

---

ಮಾಡಿಬಿಡಲೆಂದು ನಿನ್ನ

ಪ್ರೀತಿಯ ಋಣ ಸಂದಾಯ

ಕಣ್ಣಂಚಿನಿಂದಿದೋ

ನಾಲ್ಕು ಹನಿ ಕಂದಾಯ

---

ಎದೆಯ ಕನ್ನಡಿ ಚೂರಾಗಿ

ಮನದಾಳದ ಬಿಂಬ ನೂರಾಯಿತು

ಪುಡಿಯಾದ ಚದುರಿದಾ ಮೊಗ

ಪಿಸು ನುಡಿಯುತಿದೆ ಮೆಲುವಾಗಿ

ನೀ ಹೇಳದೇ ಹೋದ

ನಿನ್ನನಿಸಿಕೆಗಳು

ಇಡಿಯಾಗಿ ದಕ್ಕದೇ ಹೋದ

ಅದ್ಯಾವ ಭಾವಗಳ

ಬಿಡಿ ಬಿಡಿಯಾಗಿ ಬಿಡಿಸಿಟ್ಟಾವು

ಒಡಕಲು ಬಿಂಬಗಳು

---

ಈಗಲೂ ಅಡ್ಡಾಡುವೆ

ಕಡಲ ತೀರದಲಿ

ನೀ ಮರಳುವೆಯೇನೋ

ಎಂಬ ಮರುಳಿನಲಿ

ಉಕ್ಕಿ ಬರುವ

ನೆನಪಿನಲೆಗಳ ನಡುವೆ

ಹೆಜ್ಜೆ ಗುರುತ

ಹುಡುಕುತ್ತ ಮರಳಿನಲಿ

---

ಎಡೆಬಿಡದೆ ಸುರಿವ ಮಳೆಯ

ಕಂಡರೇಕೋ ಭೀತಿ

ಹೀಗೆಯೇ ಸುರಿದಿತ್ತಲ್ಲ

ಧಾರೆಯಾಗಿ ನಿನ್ನ ಪ್ರೀತಿ

ಒಮ್ಮೆಲೇ ಸುರಿದು ಬರಿದಾದ ನಂತರ

ಬರಡಾದೀತಲ್ಲವೇ ಈ ಭೂಮಿಯೂ ನನ್ ತರ !!

---

ಎಲ್ಲ ಭವ ಬಂಧನದ

ಬಿಡುಗಡೆಯ ಬೆಳಕಿನಲಿ

ಇಲ್ಲವಾಗುವೆನೆಂಬ

ಅವ್ಯಕ್ತ ಅಳುಕಿನಲಿ

ಸೊಲ್ಲಡಗಿ ಹೋಗುತಿದೆ

ಬರದಿರುವ ನಾಳೆಯಲಿ

ಎಲ್ಲಡಗಿ ಕುಳಿತಿರುವೆ

ಸಾವೇ ಮಾತಾಡು !!

---

ನನ್ನ ಉಸಿರುಸಿರಲೂ

ನೀನಿರುವೆ ಅಂತೇನಿಲ್ಲ

ನಿಟ್ಟುಸಿರಲಿ ನೀನಿರೋದು

ನಿಂಗೇ ಗೊತ್ತಲ್ಲ

---

ಕೋಗಿಲೆ ಮೊಟ್ಟೆಗೆ

ಕಾವು ಕೊಟ್ಟಿದ್ದೇ

ಕಾಗೆಯ ತಪ್ಪು

ಗರಿಬಿಚ್ಚಿ ಮರಿ

ಹಾರಿ ಹೋಗುತಿರೆ

ಪೆಚ್ಚಾಯ್ತು ಬೆಪ್ಪು

ಕಾಗೆಯ ಮೈಬಣ್ಣ

ಮಾತ್ರ ಕಪ್ಪು

ಕೋಗಿಲೆಯ ಮನಸೆಲ್ಲಾ ಕಪ್ಪು

ನಿನ್ನದೇ ಪಡಿಯಚ್ಚು

---

ಎತ್ತಲಾರೆ ನಿನಗಾಗಿ

ಹತ್ತಾರು ಜನ್ಮ

ಬೆನ್ನಟ್ಟಲಾರೆ ಹಿಂಬಾಲಿಸಿ

ಹಗಲಿರುಳು ನಿನ್ನ

ಆದರೇನು ಮಾಡಲಿ

ಮರೆಯಲಾರೆ ಚಿನ್ನ

ನೆನಪಾಗುವೆ ಮತ್ತೊಮ್ಮೆ

ಕೊನೆಯುಸಿರೆಳೆಯೋ ಮುನ್ನ

ಕಳೆದು ಹೋಗಿದೆ ಕನಸೊಂದು ಹುಡುಕಿಕೊಡುವೆಯಾ

ಮಧುರ ಸ್ಮೃತಿಗಳ ಹಾಳೆಗಳ ನಡುವೆಲ್ಲೋ

ಮರೆತು ಹೋಗಿದೆ ರಾಗವೊಂದು ನುಡಿಸುವೆಯಾ

ಅನುರಾಗ ಪಲ್ಲವಿಯ ಚರಣಗಳ ನಡುವೆಲ್ಲೋ

ಮೂಕವಾಗಿದೆ ಮಾತು ದನಿಗೂಡಿಸುವೆಯಾ

ಏಕಾಂತ ಮೌನದ ಮುಸುಕಿನ ಅಡಿಯೆಲ್ಲೋ

ಬಾಡಿಹೋಗಿದೆ ವನಸುಮವೊಂದು ಅರಳಿಸುವೆಯಾ

ಕಾಡುವ ನೆನಪುಗಳ ನಟ್ಟ ನಡುವೆಯೆಲ್ಲೋ

ಅಳಿದು ಹೋಗಿದೆ ನಂಬಿಕೆ ಉಳಿಸಿಕೊಡುವೆಯಾ

ಮುರಿದ ಸಂಬಂಧ ಸಂಕೋಲೆಗಳ ಕೊಂಡಿಯಲೆಲ್ಲೋ

ಆತ್ಮೀಯತೆಯ ಅರ್ಥ ಕಲಿಸಿಕೊಡುವೆಯಾ

ಕೃತಕ ಬಾಂಧವ್ಯಗಳ ನೆಲೆಗಟ್ಟಿನ ಅಡಿಯೆಲೆಲ್ಲೋ

---

ಹುಟ್ಟಿ ಸಾಯೋ ನೂರಾರು

ಸಾಲುಗಳ ಬಿಟ್ಟು ಬಿಡು

ನಡುವಿನ ನಿಟ್ಟುಸಿರಿನಂತಹ

ಮೌನಕ್ಕೆ ಕಿವಿಗೊಡು

ಅಂತಾದರೂ ನಿನ್ನ

ಮುಟ್ಟಿ ತಟ್ಟೀತು

ಹಾಡಾಗದೆ ಎದೆಯೊಳಗುಳಿದ

ಪುಟ್ಟ ಸಾಲು

---

ಪ್ರೀತಿಯ ಮುಗಿಲ ಸಾಲು

ಕರಗಿ ಮಳೆಯಾಗಲೇ ಇಲ್ಲ

ಪದಗಳ ಜೋಡಿಸಿ ಬರೆದ ಸಾಲು

ಕವಿತೆಯಾಗಲೇ ಇಲ್ಲ

ಮುಗಿಲು ಇನ್ನೆಲ್ಲೋ

ಮಳೆಯಾಗಿರಬೇಕು

ಕವಿತೆ ಕಣ್ಣಲ್ಲೇ

ಹೊಳೆಯಾಗಿರಬೇಕು

---

ನಿನ್ನ ನೆನಪೇ ಬರದ ಜಾಗಕ್ಕೆ

ಹೋಗೋಣವೆಂದು ಹೊರಟಿರುವೆ

ಜೊತೆಗೆ ನೀನೂ ಬರ್ತೀಯಾ

ಕೇಳೋಕೆ ಬಂದಿರುವೆ !

---

ಪ್ರೇಮ ರಾಗದ ಪಲುಕುಗಳು...

ಮಧುರ ಸಹಚರ್ಯದ ಮೆಲುಕುಗಳು

ಅಡಕವಾಗಿವೆ ಎದೆಯ ಮುದ್ರಿಕೆಯೊಳಗೆ

ಎಂದೂ ಮರೆಯದ ಹಾಡಿನ ಸಾಲುಗಳಂತೆ

---

ಗುರುತೇ ಇಲ್ಲದ ಅನಾಮಿಕ ಗಲ್ಲಿಯ

ತಿರು-ತಿರುಗಿ ಅಲೆದೆನು

ಹೆಸರೇ ಇಲ್ಲದ ನಂಟಿನ ಬಳ್ಳಿಯ

ಹುಡುಕುಡುಕಿ ಕಳೆದೆನು

ಹೇಗೆ ಹುಡುಕಲಿ ಎಲ್ಲಿ ಹುಡುಕಲಿ

ನಿನ್ನ ಗುರುತೇ ನನಗಿಲ್ಲ

ನನ್ನ ನೆನಪಲಿ ಉಳಿದು ಹೋಗಿರುವ

ನೀನೇ ಬೇರೆಯಲ್ಲ !!

---

ಕಡಲಿನ ತಲ್ಲಣಕೆ ಸಾಕ್ಷಿ

ದಡಕ್ಕಪ್ಪಳಿಸುವ ತೆರೆಗಳು

ಒಡಲಿನ ತಲ್ಲಣಕೆ ಸಾಕ್ಷಿ

ಕೆನ್ನೆ ಮೇಲಿನ ಕಣ್ಣೀರ ಕರೆಗಳು

---

ಕಾಡುವ ನೆನಪುಗಳ ಮರೆಯಲೆಂದು

ಕಾಡಿಗೆ ಹೋದರೂ

ಕಾಡುತಿವೆ ನೆನಪಾಗಿ ನಿನ್ನ

ಕಾಡಿಗೆ ಕಂಗಳು

---

ನಡುರಾತ್ರಿಯಲೆದ್ದು ಹಟ ಮಾಡಿ

ಅಳುವ ಮಗುವಿನಂತೆ

ದಿನ ರಾತ್ರಿ ರಚ್ಚೆ ಹಿಡಿದು ಕಾಡುತಿವೆ

ನಿನ್ನ ನೆನಪುಗಳ ಕಂತೆ

---

ನಿನ್ನ ನೆನಪು ಎದೆಯ ಕರೆಗಂಟೆಯ

ಅದುಮಿದಾಗ

ಕವಿತೆಯಾಗಿ ಹೊರಬಂತು

ಅಂತರಂಗದನುರಾಗ

---

ಬಿಟ್ಟು ಹೋದವಳ

ಬಿಟ್ಟಿರಲಾಗದಾಗ

ಬಿಟ್ಟೂ ಬಿಡದೆ ನೆನಪಾಗಿ

ಬಿಟ್ಟವಳು…

ಬರಿ ನೆನಪೇ ಆಗಿ

ಬಿಟ್ಟಳವಳು…!!

---

ನಿನ್ನ ನೆನಪಿಂದ ಹೊಳೆಯುತ್ತಿದ್ದ

ಕಣ್ಣುಗಳೇ ಈಗ

ನಿನ್ನ ನೆನಪಿಂದಲೇ

ಹೊಳೆಯಾಗುತ್ತಿವೆ

---

ನನ್ನ ತೋಳ ತೆಕ್ಕೆಯೊಳಗೆ

ಹುದುಗಿ ಕುಳಿತಿದ್ದ ಹುಡುಗಿ

ಯಾವ ತೋಳದ ತೆಕ್ಕೆಯೊಳಗೆ

ಕುಳಿತಿರುವಳೋ ಈಗ ಅಡಗಿ

---

ಅವಳ ಕುರಿತು ಕಟ್ಟಿದ

ಕವನ ಶಾಯರಿಗಳಿಗೆ ಲೆಕ್ಕವೇ ಇಲ್ಲ

ಬೇಸರದ ಸಂಗತಿಯೆಂದರೆ

ಅವಳಿಗೂ ಇದ್ಯಾವುದೂ ಲೆಕ್ಕಕ್ಕೇ ಇಲ್ಲ

---

ನನ್ನ ಹನಿಗಳಿಗೇ

ಯಾವ ಹೆಸರಿನ ಹಂಗೂ ಇಲ್ಲ

ಕಣ್ಣ ಹನಿಗಳಿಗೇಕೆ

ನಿನ್ನ ನೆನಪಿನ ಹಂಗು

---

ಮದುವೆ ದಲ್ಲಾಳಿಗಳ ಬಳಿಯಿರೋ

ಜಾತಕ ಫೋಟೋಗಳ ಲಿಸ್ಟಲಿ,

ಸಾಫ್ಟ್ವೇರ್ ತಂತ್ರಜ್ಞರೀಗ

ಕುಳಿತಿದ್ದಾರೆ ಲಾಸ್ಟಲಿ

---

ಮುಗಿಲು ಮೌನದಲಿ

ರೋಧಿಸುತ್ತಿತ್ತು

ಅಂತ್ಯವೇ ಇಲ್ಲದ ದುಃಖಕೆ

ಮುನ್ನುಡಿಯೋ ಎಂಬಂತೆ

ವಸುಧೆಯಾದರೋ

ತಣ್ಣಗೆ ನಿದ್ರಿಸುತ್ತಿಹಳು

ಕಾರಣವೇ ಹೇಳದೆ ಹೋದ

ಹುಡುಗಿಯಂತೆ

---

ನೀನಿಲ್ಲದೇ ಹೋದರೂ

ನೀ ನಿಲ್ಲದೇ ಹೋದರೂ

ನಾ ನಿಲ್ಲದಾದರೂ

ನಾನಿಲ್ಲವಾದರೂ

ಹುಸಿಯಾದೀತೇ ನನ್ನ ನಿನ್ನ ಪ್ರೀತಿ?

---

ಕಣ್ಣಿನ ಭಾಷೆ

ಕಲಿತುಕೋ ಗೆಳತಿ

ಕೇಳಿಸಿಕೋ ಈ

ಮೌನದ ವಿನತಿ

ಹೃದಯ ಸಂವೇದನೆಯ ಮಾತಲಿ

ಹೇಳೋದು ಹ್ಯಾಗೆ

ಅರಿವಾಗಬೇಕು... ನಿನಗೇ...

ಗೊತ್ತಾಗದ ಹಾಗೆ

---

ಸತ್ತು ಹೋದ

ಸಂಬಂಧವ

ನೆನೆಯೋದ್ಯಾಕೆ ಅಂತಿರಾ?

ಸತ್ತವರು

ಬದುಕಿ ಬಂದ

ಪವಾಡಗಳಿವೆ ನಂಬ್ತೀರಾ?

---

**ಇದೂ ಕೂಡಾ ಇನ್ನೊಂದು ಭಾವಾನುವಾದ. ಈ ಪದ್ಯ ನಾನು ಒಂಬತ್ತನೇ ಕ್ಲಾಸಿನಲ್ಲಿದ್ದಾಗ ಓದಿದ್ದು. ಅಂತೆಯೇ ಅಚ್ಚುಮೆಚ್ಚಿನದ್ದು. ಇದು ಭಾವಾನುವಾದವೇ ಹೊರತು ಭಾಷಾನುವಾದವಲ್ಲ**

**ಮೂಲ: ಸುಭದ್ರಾ ಕುಮಾರಿ ಚೌಹಾಣ್ ಕವಿತೆ : ಮೇರಾ ನಯಾ ಬಚ್‌ಪನ್**

ಮತ್ತೆ ಮತ್ತೆ ನೆನಪಾಗುತಿದೆ ಆ ಬಾಲ್ಯಕಾಲ,
ಮತ್ತೆಂದಾದರೂ ಬಂದೀತೆ ಆ ರಮ್ಯ ಚೈತ್ರಕಾಲ?

ಬಡವ ಬಲ್ಲಿದ ಎಂಬ ಭೇದ ಗೊತ್ತಿರದ,
ಜಾತಿ-ಧರ್ಮಗಳ ಸೋಂಕೇ ಇರದ
ನನ್ನ ಪುಟ್ಟ ಗುಡಿಸಲಿಗೆ ನಾನೇ ರಾಣಿ,
ಹಂಸತೂಲಿಕಾ ಕಲ್ಪವಾಗಿ ಹರಕು ಗೋಣಿ

ಚಂದಮಾಮನ ನೋಡುತಾ ಬೆಳದಿಂಗಳ ಕೈತುತ್ತು,
ಅತ್ತು ಕರೆದಾಗಲೆಲ್ಲ ರಮಿಸಿ ಅಮ್ಮನ ಸಿಹಿಮುತ್ತು
ಅಜ್ಜಿಯ ಮಡಿಲಲಿ ಕುಳಿತು ಕೇಳಿದ ಕತೆ,
ತಟ್ಟುತಿರಲಿಲ್ಲ ಯಾವ ದುಃಖ, ಕಷ್ಟ, ವ್ಯಥೆ

ಬರಲಾರೆಯಾ ಮತ್ತೊಮ್ಮೆ ಮರಳಿ ಓ ಬಾಲ್ಯಕಾಲ,
ಬೀಸಲೋಸುಗ ಇನ್ನೊಮ್ಮೆ ನಿನ್ನ ದಿವ್ಯ ಮೋಹಜಾಲ
ಹೀಗೆ ಬಾಲ್ಯವ ಮರಳಿ ಕರೆವ ಹೊತ್ತಿನಲಿ,
ಒಳ ಬಂದಳು ನನ್ನ ಮುದ್ದು ಮಗಳು ಗತ್ತಿನಲಿ

ತಪ್ಪು ಹೆಜ್ಜೆಯ ಮೇಲೆ ಹೆಜ್ಜೆ ಹಾಕುತಾ,
ತೊದಲ್ನುಡಿಯಿಂದಲೆ ನನ್ನ ಕೂಗಿ ಕರೆಯುತಾ
ಅವಳಂತೆಯೇ ನಾನು ತೊದಲ್ನುಡಿಯುತ್ತಾ,
ಬಿಗಿದಪ್ಪಿದೆ ಕೈ ಹಾಕಿ ಕೊರಳ ಸುತ್ತಾ

ವರ್ಷಗಳ ಹುಡುಕಾಟಕೆ ಕೊನೆಗೂ ತೆರೆ ಬಿತ್ತು ಕಳೆದ
ಬಾಲ್ಯವು ಮತ್ತೆ ಮರುಕಳಿಸಿತ್ತು

**ಈ ವಿಜ್ಞಾನಿಗಳು ಎಲ್ಲಾ ಹಾಳು ಮಾಡಿಬಿಟ್ರು...**

ಚಂದಮಾಮನ ತೋರಿಸಿ ಮೊಲದ ಕಥೆ ಹೇಳಿದ್ರೆ

ಚಂದ್ರಕಂದಕಗಳ ಬಗ್ಗೆ ಮಗು ಕೇಳುತ್ತೆ,

ಪುಷ್ಪಕವಿಮಾನದ ಸೊಗಸು ಹೇಳೋಕೆ ಹೋದ್ರೆ

ಆಗ ಪೆಟ್ರೋಲ್ ಎಲ್ಲಿತ್ತು ಅಂತ ಕೆಣಕುತ್ತೆ

ರಕ್ತಬೀಜಾಸುರರ ಕಥೆ ಹೇಳೋಣ ಅಂದ್ರೆ

ಆಗ ಕ್ಲೋನಿಂಗ್ ಎಲ್ಲಿತ್ತು ಅಂತ್ ಸವಾಲೆಸೆಯುತ್ತೆ

ಈ ವಿಜ್ಞಾನಿಗಳು ಎಲ್ಲಾ ಕಲ್ಪನೆಗಳ

ಕಥೆ ಕೆಡಿಸಿಬಿಟ್ಟಿದ್ದಾರೆ...

ನೂರಿನ್ನೂರು ವರ್ಷಗಳ ಮುಂಚೆನೇ ನಾನು

ಹುಟ್ಬೇಕಿತ್ತು ಅಂತ ಅನ್ಸುತ್ತೆ ಒಮ್ಮೊಮ್ಮೆ

---

**( ನೇಮಿಚಂದ್ರರ 'ಯಾದ್ ವಶೇಮ್' ಒದಿ ನೋಡಿ. ಆಮೇಲೆ ಜೀವಮಾನದಲ್ಲೇ ದ್ವೇಷದ ಯೋಚನೆ ಅಪ್ಪಿತಪ್ಪಿ ಕೂಡಾ ಯಾರ ಕನಸಲ್ಲೂ ಸುಳಿಯಲಾರದು)**

**ಬೇಕೇ ಹೇಳಿ...ಈ ಪರಿಯ ದ್ವೇಷ...?**

ಕಾನ್ಸಂಟ್ರೇಶನ್ ಕ್ಯಾಂಪಿನ ಕ್ರೆಮೆಟೋರಿಯಂನಲ್ಲಿ

ಉರಿದು ಬೂದಿಯಾಗಿ ಹೋದ

ವಿಷಗಾಳಿಯ ಹಾಯಿಸಿದ ಛೇಂಬರಿನೊಳಗೆ

ಉಸಿರಾಡುತ್ತಲೇ ಇಲ್ಲವಾಗಿಹೋದ

ಕಾಮಪಿಪಾಸು ನಾಜಿ ಸೈನಿಕರ ಅಧಿಕಾರಿಗಳ

ದಾಹಕ್ಕೆ ಸಿಲುಕಿ ನಲುಗಿಹೋದ

ವಿಜ್ಞಾನಿ-ವೈದ್ಯರುಗಳ ಪ್ರಯೋಗಗಳಿಗೆ

ಬಲಿಪಶುವಾಗಿ ನರಳಿದ

ತಮ್ಮವರನೆಲ್ಲ ಕಣ್ಣೆದುರೇ ಕಳೆದುಕೊಂಡು

ಬದುಕಿದ್ದೂ ಶವವಾದ

ತುಂಡು ಬ್ರೆಡ್ಡಿಗೂ ಗತಿಯಿಲ್ಲದೆ ಮೂಳೆಚಕ್ಕಳವಾಗಿ

ಸೊರಗಿ ಅಸುನೀಗಿದ

ನೂರು ಸಾವಿರ ಸಾವಿನ ಕಥೆಯನ್ನು ಕೇಳಿದ ಮೇಲೂ

ಎದೆಯ ಮೇಲೊಮ್ಮೆ ಕೈಯಿಟ್ಟು ಕೇಳಿ ನೋಡಿ...

ಬೇಕೆನ್ನಿಸುತ್ತಿದೆಯೇ ಈ ಜನಾಂಗೀಯ ದ್ವೇಷ?

**ಇನ್ನೆಷ್ಟು ಕಾಲ ಸಹಿಸಿ ತೆಪ್ಪಗಿರಬೇಕು...?**

ಹೊಡೆದರೂ ಬಡಿದರೂ, ವಾಚಾಮಗೋಚರ ಬೈದರೂ

ತುಟಿಪಿಟಕ್ಕೆನ್ನದಂತೆ ಸುಮ್ಮನಿರಬೇಕಂತೆ

ಆಳಿನಂತೆ ದುಡಿದರೂ, ಹಗಲಿರುಳು ಗೇಯ್ದರೂ

ಕೈಕಾಲು ಬತ್ತಿದರೂ ಸುಮ್ಮನಿರಬೇಕಂತೆ

ಜೂಜಿನಲಿ ಹಣ ಕಳೆದರೂ, ಮೋಜಿನಲಿ ಮೈ ಮರೆತರೂ

ಮನೆ ಮರ್ಯಾದೆಗಾಗಿ ಸುಮ್ಮನಿರಬೇಕಂತೆ

ಹಣ ತರಲಿಲ್ಲವೆಂದು ಜರಿದರೂ, ಉರಿವ ಕೊಳ್ಳಿಯನೇ ನುರಿದರೂ

ಅವುಡುಗಚ್ಚಿ ಸಹಿಸಿಕೊಂಡು ಸುಮ್ಮನಿರಬೇಕಂತೆ

ಮನು ಹೇಳಿದ್ದ ನಂಬಿ, ಮನಸಿನ ಮಾತನ್ನೇ ನುಂಗಿ

ನಾಲ್ಕು ಕೋಣೆಯೊಳಗೇ ಬಂಧಿಯಾದರೂ ಸುಮ್ಮನಿರಬೇಕಂತೆ

ತಾಳಿಗೆ ಕೊರೊಳೊಡ್ಡಿದ ಮಾತ್ರಕ್ಕೆ, ಕುಣಿಸೋ ಗಂಡಿನ ಸೂತ್ರಕ್ಕೆ

ಕೀಲುಬೊಂಬೆಯಂತೆ ಕುಣಿದು ಸುಮ್ಮನಿರಬೇಕಂತೆ

ಗಂಡ ಸತ್ತರೆ ವಿಧವೆ, ಗಂಡಿಗಾದರೆ ಮರುಮದುವೆ,

ಸತಿಯಾಗಿಸಿ ಚಿತೆಯೇರಿಸಿದರೂ ಸುಮ್ಮನಿರಬೇಕಂತೆ

ಕಾಲ ಬದಲಾದರೇನಂತೆ, ಶೋಷಣೆಗೆ ಹಲವು ಮುಖಗಳಂತೆ,

ಸಹಿಸುವ ತಾಕತ್ತು ಇದ್ದ ಮಾತ್ರಕೆ ಸಹಿಸುವುದೇಕಂತೆ

ಸುಮ್ಮನಿದ್ದಿದ್ದು ಸಾಕಿನ್ನು, ಸಮಾನತೆಯು ಬೇಕಿನ್ನು

ಗಂಡಿಗೆ ಸರಿ ಮಿಗಿಲೆನಿಸಿ ಮುನ್ನುಗ್ಗುವ ಹೆಣ್ಣೇ ನೀ ಯಾಕೆ ಸುಮ್ಮನಿರಬೇಕು?

---

ಎರಡು ನಿರೀಕ್ಷೆ.. ಎರಡು ಮೌನ..

ಮತ್ತೆರಡು ದಿವ್ಯ ಏಕಾಂತಗಳ

ನಡುವೆ ಬಂದು ಹೋದ

ಎರಡು ಕನಸುಗಳ ನೆನಪುಗಳೇ

ಸಾಕಲ್ಲವೆ...

ಹೊಸ ಕನಸುಗಳೆರಡರ

ಬೀಜಾಂಕುರಕ್ಕೆ

---

**ನಾ ಕಳೆದುಕೊಂಡಿದ್ದು....ಮತ್ತೆಂದೂ ಸಿಗಲಾರದ್ದು**

ಮಳೆಗಾಲದ ಅಂಗಳದ
ದಬ್ಬೆ ಮೇಲಿನ ಪಾಚಿ ಲೋಳೆ ಮೇಲೆ
ಕಾಲಿಟ್ಟು ಜಾರಿ ಬಿದ್ದಿದ್ದು
ನಿದ್ದೆಯೆಳೆದರೂ ಕಣ್ತೆರೆದು
ಸೋಣೆಯಾರತಿ ಪಂಚಕಜ್ಜಾಯಕ್ಕೆ
ಕಾಗದದ ಕೊಟ್ಟೆ ಹಿಡಿದಿದ್ದು

ಚಾಪೆ ಹಣ್ಣು ಪಿತ್ತವೆಂದು ಎಷ್ಟು ಹೇಳಿದರೂ
ಕೇಳದೆ ಸಮಾ ತಿಂದು
ಹೊಟ್ಟೆನೋವು ಬಂದಿದ್ದು
ಹಬ್ಬದಗುಡಿ ಸುತ್ತಿ ಸುತ್ತಿ
ಬತ್ತಿಹೋಗಿ ನೋವಾದ ಪಾದಗಳಿಗೆ
ಅಮ್ಮ ಎಣ್ಣೆ ಬಳಿದಿದ್ದು

ಕಾಟು ಮಾವಿನ ಮರಕ್ಕೆ
ಸ್ಪರ್ಧೆಯ ಮೇಲೆ ಕಲ್ಲು ಹೊಡೆದು
ಹುಳಿ-ಸಿಹಿ ಹಣ್ಣು ತಿಂದಿದ್ದು
ಬಿಂಬಲಕಾಯಿಯ ರುಚಿ
ನಾಲಿಗೆಗೆ ಸೋಕಿದಾಗ ಅದರ ಹುಳಿಗೆ
ಮುಖವ ಕಿವುಚಿದ್ದು

ಹುಚ್ಚು ಮಳೆಗೆ ಸೊಕ್ಕಿ ಹರಿವ
ಹೊಳೆಯಲಿ ಬಳಿದು ಬರುವ ಮರಗಳ
ಲೆಕ್ಕ ಇಡಲು ಸೋತಿದ್ದು
ಸುಳ್ಳೇ ಹೊಟ್ಟೆನೋವಿನ
ನೆಪ ಹೇಳಿ ಯಾಮಾರಿಸಿ ಶಾಲೆಗೆ
ಚಕ್ಕರ್ ಹಾಕಿದ್ದು

ಇವೆಲ್ಲಾ ಮತ್ತೆ ಬರಲಾರದೆಂದೇನೋ
ಮತ್ತೆ ಮತ್ತೆ ನೆನಪಾಗಿ ಕಾಡಿದ್ದು
ನೆನಪಿನ ನವಿರಿಗೆ ಕಣ್ಣಂಚು ಹಸಿಯಾಗಿ
ಪುಟ್ಟ ಹನಿಯೊಂದು ಜಾರಿದ್ದು !!

**ಯಾಕೆ ಬೇಕಿತ್ತು ಇದೆಲ್ಲಾ...? ( ಪ್ರೇರಣೆ: ಕಾರಂತರ ಮೂಕಜ್ಜಿಯು ಆಡುವ ದೇವರ ಅವತಾರಗಳ ಬಗೆಗಿನ ಮಾತುಗಳು)**

ಯಾಕೆ ಬೇಕಿತ್ತು ಈ ಅವತಾರಗಳೆಲ್ಲಾ

ದುಷ್ಟರು-ದುರುಳರು ಹುಟ್ಟಿ ಬೆಳೆದು

ಅಮಾಯಕ ಜನಗಳ ಮೆಟ್ಟಿ ತುಳಿದು

ಅಟ್ಟಹಾಸಗೈದು ಮೆರೆದಾಡಿದ ಮೇಲೆ

ಅವತಾರಗಳ ಹೆಸರಲಿ ಜನ್ಮಪಡೆದು

ಅದೆಷ್ಟೋ ಕಾಲಗಳ ತನಕ ತಡೆದು

ದುಷ್ಟರೊಡನೆ ಕಾದಾಟವು ನಡೆದು

ಯುದ್ಧದಲಿ ಅಮಾಯಕರ ನೆತ್ತರು ಹರಿದು

ಬೇಕಿತ್ತೆ ಈ ಅವತಾರಗಳ ರಗಳೆಯೆಲ್ಲಾ..?

ಸರ್ವಶಕ್ತ ಅವನು ಅನ್ನುವರಲ್ಲ

ದುಷ್ಟರೇ ಹುಟ್ಟದಂತೆ ಮಾಡಿಬಿಡಬಹುದಲ್ಲ

ಆಗ ಕಾಯುವ ಕೊಲ್ಲುವ ರಗಳೆಯೇ ಇಲ್ಲ.

ಹಾಗೆನಾದರೂ ಆದರೆ ಅವನ ನೆನೆಯುವವರೇ ಇಲ್ಲವಾಗಿ

ಭಗವಂತನ ಕುರಿತು ಜನಕೆ ಆದರ ಕಮ್ಮಿಯಾಗಿ

ಅವನ ಅಸ್ತಿತ್ವ ಜಗದಿಂದಲೇ ಅಳಿದುಹೋಗಿ

ಬಿಡುವ ಅಪಾಯದ ಕುರಿತಾದ ಭೀತಿಯೇ?

ಅಬ್ಬಾ!.. ದೇವರೂ ಕೂಡಾ ಇಷ್ಟು ಸ್ವಾರ್ಥಿಯೇ

---

ಜಗತ್ತಿನ ಮೊತ್ತ ಮೊದಲ

ವಂಚನೆಯೇನಲ್ಲ ಇದು

ಆದರೂ ನನ್ನ ಪಾಲಿಗಿದು

ಮೊದಲನೆಯದು ಅಲ್ವಾ?

ಜಗತ್ತಿನ ಕಟ್ಟ ಕಡೆಯವಳೇನು

ಅಲ್ಲ ನೀನು... ಆದರೂ

ಅವರ್‍ಯಾರೂ ನೀನಾಗಲಾರರು ಅಲ್ವಾ?

---

ಸಪ್ತ ವರ್ಣದ ಸುಪ್ತ ಕನಸೊಂದು

ಗುಪ್ತಗಾಮಿನಿಯಂತೆ ಹರಿದು ಬಂದು

ವ್ಯಕ್ತಪಡಿಸುವಾಸೆ ತಿಳಿಯದು ಹೇಗೆಂದು

ಲುಪ್ತವಾಗಿ ಕುಳಿತಿದೆ ಎದೆಯೊಳಿಂದು

ಕಲ್ಪನೆಯ ಮೂಸೆಯಲಿ ಎರಕ ಹೊಯ್ದು

ನಿರೀಕ್ಷೆಯ ಹನಿ-ಹನಿಯಲಿ ನಿತ್ಯವೂ ತೊಯ್ದು

ಮನದಂಗಳದಿ ಬಿತ್ತಿ ಬೆಳೆಗಾಗಿ ಕಾಯ್ದು

ಭಾವತಂತುಗಳ ಹೊಸೆದು ನವಿರಾಗಿ ನೇಯ್ದು

ಹೊತ್ತಿರುವೆ ಇಂತೊಂದು ಮಹದಾಶೆಯ ಮೂಟೆ

ಸನ್ನದ್ಧನಾಗಿ ಆಡಬೇಕಿದೆ ಸ್ವಪ್ನದ ಬೇಟೆ

ಹಗುರಾಗಿಸಿ ಬಾಳಿನ ಜಂಜಡಗಳ ಹೊರೆ

ಕನಸುಗಳ ರೆಕ್ಕೆಬೇಕು ಹಾರಲಿಕ್ಕೆ ಖರೇ

---

ಆಕಳಿಕೆ ಬಂದಾಗಲೆಲ್ಲ

ಯಾರೋ ನೆನಪಿಸಿಕೊಂಡರು

ಅಂತಾರೆ...

ಅಯ್ಯೋ.. ನಿಂಗಂತೂ

ದಿನವಿಡೀ ಆಕಳಿಸೋದೇ

ಹಂಗಾರೆ

---

ನಿನ್ನೇ ನಾನ್ಯಾಕೆ ಆರಿಸಿದ್ದು

ಅಂತ ಕೇಳಿದ್ದೆ ನೀನೊಮ್ಮೆ

ಈಗ ನಿನ್ನ ನೆನಪಾದಾಗಲೆಲ್ಲ

ನನ್ನೇ ನಾ ಕೇಳೋದು ಅದನ್ನೇ

---

ನಮ್ಮ ಪ್ರೀತಿಯ ಕೊಲೆಗಾರಳು

ನೀನೇ ಆದರೂ

ನನಗೇಕೆ

ನಿನ್ನ ನೆನಪಲಿ ನರಳುವ

ಜೀವಾವಧಿ ಶಿಕ್ಷೆ?

---

ಸುಮ್ ಸುಮ್ನೆ ನೆನಪಾಗಿ ಕಾಡಬೇಡ್ವೇ..

ಯಾವಾಗ್ಲೂ ಕಣ್ಣಿಗೆ ಕಸ ಬಿತ್ತಂದ್ರೆ

ಯಾರೂ ನಂಬಲ್ವೇ !

---

ಈ ಜಗತ್ತಲ್ಲಿ ಬದಲಾವಣೆ ನಿರಂತರ

ಅಂತ ಹೇಳುತ್ತೆ ವೇದಾಂತ

ಆದರೆ ನೀನೂ ಬದಲಾಗಿ

ಬಿಟ್ಟೆ ನೋಡು... ಅದೇ ದುರಂತ

---

ಬಹಳ ದೂರ ನೀ ಹೋಗಿಬಿಟ್ಟೆ

ಹಿಂದಿರುಗಿ ಬರಲಾಗದಷ್ಟು...

ಬೇಸರವಾಗಿದ್ದು ಅದಕ್ಕಲ್ಲ

ಬದಲಾಗಿ ಬಿಟ್ಟೆಯಲ್ಲ ನೀ

ಹಿಂದಿರುಗಿ ನೋಡಲೂ ಆಗದಷ್ಟು..!

---

ಚರಿತ್ರೆ ಮರುಕಳಿಸುತ್ತೆ ಅನ್ನೋ ಮಾತನ್ನು ನಂಬಿ

ಖುಶಿಯಿಂದ ಕಾಯುತ್ತ ಕುಳಿತಿದ್ದೆ

ನೀ ಮತ್ತೆ ಸಿಗಬಹುದೆಂದು...

ಆದರೀಗ ಯಾಕೋ ದಿಗಿಲಾಗುತ್ತಿದೆ ನೆನಪಾಗಿ

ನೀ ಕಳೆದು ಹೋಗಿದ್ದು ಕೂಡಾ

ಅದೇ ಚರಿತ್ರೆಯ ಭಾಗವೆಂದು !

---

ಸದಾ ನೀ ಜೊತೆಯಾಗಿರು

ಅಂತ ಪ್ರಾರ್ಥಿಸಿದ್ದೆ

ಯಾವುದೋ ದೇವತೆ

ಅಸ್ತು ಅಂದಿರಬೇಕು

ಈಗ ಮರೆಯಬೇಕು

ಅಂದುಕೊಂಡರೂ ಸದಾ ನಿನ್ನ

ನೆನಪಾಗೋದು ಅದಕ್ಕೇ ಇರಬೇಕು

---

ನಿನ್ನೆದೆಯಲಿ ಊಟೆಯೊಡೆದು

ಚಿಮ್ಮಿದ ಪ್ರೀತಿಯ ಜಿನುಗು

ಭಾವ ಪ್ರವಾಹವಾಗಿ

ನನ್ನೆದೆಯ ನಡುಗುಡ್ಡೆಯ ಸುತ್ತುವರಿದಾಗ

ಮನದಲ್ಲೇನೋ ಅರಿಯದ ಪುಳಕವಿತ್ತು

ನಾನರಿಯದೆ ಹೋದುದೆಂದರೆ...

ಏರಿದ ನೀರೂ ಸಹಾ

ಇಂದಲ್ಲ ನಾಳೆ ಇಳಿಯಲೇಬೇಕು

ನಿನ್ನ ಗಮ್ಯದ ಕಡಲು ಬೇರೆಯಿರಬೇಕು

---

ಎದೆಯ ಕಣಿವೆಯೊಳಗೆ

ಧುಮ್ಮಿಕ್ಕುವ ನೆನಪುಗಳ ಜಲಪಾತವ

ಹಿಡಿದಿಡಲು ಕಟ್ಟಿ ಸ್ಮೃತಿಗಳ ಕಟ್ಟೆ

ಒಲವಿನ ಒರತೆಯ

ಎದೆಯೊಳಗೇ ಅದುಮಿಟ್ಟೆ

ಈಗ ಬದುಕು ನಿಂತ ಹಿನ್ನೀರು!

ಹಿಂದೊಮ್ಮೆ ನೆನಪುಗಳ ಮಳೆಯಾದಾಗ

ಭಾವಪ್ರವಾಹ ಉಕ್ಕಿ ಹರಿದಿದ್ದಕ್ಕೆ ಸಾಕ್ಷಿ

ಕೆನ್ನೆ ಮೇಲೆ ಕರೆಗಟ್ಟಿದ ಕಣ್ಣೀರು

---

ಪ್ರೀತಿ ಮಳೆ ನಿಂತ ಮೇಲೆ

ಹೇಗೆ ಹೆಚ್ಚೀತು

ಒಲವಿನ ಒಳಹರಿವು?

ಸದ್ದಿಲ್ಲದೆ ಸೋರಿಹೋಗಿದೆ

ಎದೆ ಕಟ್ಟೆಯೊಳಗಿನ

ಒಲವು ಕೂಡಾ

ಇನ್ನೆಲ್ಲೋ ಸಮೃದ್ಧಿ...

ನನ್ನ ಎದೆಯಷ್ಟೇ ಬರಡು

---

ನನ್ನ ನಿರೀಕ್ಷೆ-ಕನಸುಗಳೆಲ್ಲ

ಕಣ್ಣ ಕಟ್ಟೆಯೊಳಗೇ ಜೋಪಾನವಾಗಿವೆ

ಆದರೂ ಒಮ್ಮೊಮ್ಮೆ

ಹನಿಯಾಗಿ ಹೊರಹೊಮ್ಮುತ್ತವೆ

ನೀ ಬಂದೆಯಾ ಎಂದು

ಇಣುಕಿ ನೋಡಲು ಅಷ್ಟೆ !!

---

ಭಾವ ತೀರದೊಳು

ನಾ ಏಕಾಂಗಿಯಲ್ಲ

ತೀರದ ನೆನಪುಗಳ

ಅಲೆಯ ಸಪ್ಪಳವಿದೆಯಲ್ಲ

ಕಾಡುವ ಕ್ಷಣಗಳ

ಮೊರೆತ ಭೋರ್ಗರೆಯುತ್ತಿದೆಯಲ್ಲ

ಒದ್ದೆ ಮರಳಿನ ಮೇಲೆ

ನಿನ್ನ ಹೆಜ್ಜೆಗುರುತಿದೆಯಲ್ಲ

ಕಿವಿಯ ತುಂಬಿದ

ನಿನ್ನ ಗೆಜ್ಜೆ ದನಿಯಿದೆಯಲ್ಲ

ಅದಕೇ ಹೇಳಿದ್ದು

ನಾ ಏಕಾಂಗಿಯಲ್ಲ...

ನಿನ್ನ ಸಹಚರ್ಯದ

ಮಧುರಸ್ಮೃತಿಯಿರುವ ತನಕ

ಇಂದಲ್ಲ ನಾಳೆ ಮಳೆ

ಬರಲೇಬೇಕು

ಧರೆಯ ಧಗೆಯು ತಣಿದು

ತಂಪಾಗಲೇಬೇಕು

ನನ್ನ ಚಿಂತೆ ಬಾರದ

ಮಳೆಯ ಕುರಿತಲ್ಲ

ಬಂದೇ ಬರುತ್ತಿ ಎನ್ನಲು

ನೀನೇನು ಮಳೆಯಲ್ಲವಲ್ಲ!

---

ಕಾಡುವ ಪ್ರಶ್ನೆಗಳೇ ಹೀಗೆ-

ಮನವ ಕೆದಕಿ

ಯೋಚನೆಯ ಬೆದಕಿ

ಸುಡುವ ಬಿಸಿಲಿನ ಬೇಗೆ

ಥೇಟ್ ನಿನ್ನ ನೆನಪಿನ ಹಾಗೆ!

---

ಗಮ್ಯವೆತ್ತಲೋ... ಗುರಿ ಯಾವುದೋ

ಗೊತ್ತಿಲ್ಲ... ಓಡುತ್ತಿದ್ದೇವೆ

ಮುಗ್ಗರಿಸಿ ಬಿದ್ದರೂ ಸಾವರಿಸಿಕೊಂಡೆದ್ದು

ಮತ್ತೆ ಓಡುತ್ತಿದ್ದೇವೆ

ಕಾಲಕ್ಕೆ ತಕ್ಕಂತೆ ಕೋಲ... ಬೆಂಕಿ ಹಚ್ಚಿದ ಬಾಲ

ದಿಕ್ಕೆಟ್ಟು ಓಡುತ್ತಿದ್ದೇವೆ

ಸಂಬಂಧ-ಬಂಧ ಅನುರಾಗ ಅನುಬಂಧ

ಧಿಕ್ಕರಿಸಿ ಓಡುತ್ತಿದ್ದೇವೆ

ಸ್ಪರ್ಧೆಯೋ ಜಿದ್ದೋ...ಅರಿಯದೆಯೋ ಅರಿತಿದ್ದೋ

ಒಟ್ಟಾರೆ ಓಡುತ್ತಿದ್ದೇವೆ

ಗೆಲ್ಲುವುದೆಂಬುದೇ ಇಲ್ಲ, ಬರಿ ಮೈಲಿಗಲ್ಲುಗಳೇ ಎಲ್ಲ

ದಾಟಿ ಮುನ್ನುಗ್ಗಿ... ಓಡುತ್ತಿದ್ದೇವೆ

ಕೊನೆಯಿಲ್ಲದ ಈ ಓಟ...

ಕೊನೆಯ ನಿಲ್ದಾಣದ ತನಕ

ಮಡದಿಯ ಮುದ್ದಿಸಲು

ರವಿ ಬರಲಿಲ್ಲವೆಂದು

ಮ್ಲಾನತೆಯ ಮುಸುಕೊಳಗೆ

ಇಳೆ ಮಲಗಿಹಳು ಇಂದು

ಮಳೆ ಸುರಿದರೂ ತಣಿಯಲಿಲ್ಲ

ಅವಳ ಕೋಪ

ಕೆನ್ನೀರಾಗಿ ಹರಿಯುತಿದೆ

ಅವಳ ಕಣ್ಣೀರು... ಪಾಪ

---

ಮನಸಿನ 'ಸವರ್ಣಗಳು ಧೀರ್ಘ ಸಂಧಿ' ಯಾಗುವ ಮುನ್ನ

ನಿನ್ನ ಬದುಕಿನಲಿ ಯಾರದೋ 'ಆಗಮ' ನ...

ನನ್ನ 'ಲೋಪ' ಗಳು ಏನೆಂದು ಕೂಡಾ ತಿಳಿಸದೇ

ನನ್ನ ಮರೆತು ಬಿಡೆಂಬ ನಿನ್ನ 'ಆದೇಶ'ವು ಕೂಡಾ

ನನ್ನ 'ಕರ್ಮ ದಾರಿಯ ಮೋಸ' ವಿರಬೇಕು !!

---

ಮಳೆಗಾಲದೊಂದು ತಣ್ಣನೆಯ ರಾತ್ರಿಯಲಿ,

ಕಪೋಲ ಚುಂಬಿಸುವ ನಿನ್ನ ನೆನಪಿನಶ್ರು ಧಾರೆಯಲಿ,

ಒದ್ದೆಯಾದ ಮನದ ಅಂಗಳದ ತುಂಬೆಲ್ಲಾ,

ನೀ ನಲಿದು ಹೋದ ಹೆಜ್ಜೆಯದೇ ಗುರುತು

---

ಹೃದಯದ ಪಿಸುಮಾತುಗಳಿಗೂ ಸ್ಪಂದಿಸಿ

ಕಿವಿಯಾದವಳೇ ಕೇಳು

ಈಗ ಕೂಗಿ ಕರೆದರೂ ಕೇಳೋಲ್ಲಾ ಅಂದ್ರೆ

ನಂಬೋದು ಹ್ಯಾಗೆ ಹೇಳು?

---

ಕಣ್ಣಂಚಿನ ತೇವ ಆರಿ ಹೋದೀತು

ಇಂದಲ್ಲಾ ನಾಳೆ...

ಎದೆಯೊಳಗಿನ ಗಾಯಕ್ಕೆ

ಮದ್ದು ಗೊತ್ತಿದ್ದರೆ ಹೇಳೆ

ಈಗ ಕತ್ತಲಾದ ಮಾತ್ರಕ್ಕೆ

ಸೂರ್ಯ ಹುಟ್ಟಿದ್ದು ಸುಳ್ಳಾಗೋದೇ

ಮನಸು ಮುರಿದ ಮಾತ್ರಕ್ಕೆ

ಪ್ರೇಮಿಸಿದ ಹೃದಯ ಕಲ್ಲಾಗೋದೇ?

---

ಬದುಕು ನಿಂತ ರಾಡಿ

ನೀರಂತಾಗಿದೆ

ನಿನ್ನೆ ಮಳೆಯ ಬಿರುಸಿಗೆ

ಕೋಡಿ ಹರಿದಿದ್ದ ಮರೆತಿದೆ

ನಾಳೆ ಮಳೆ ಬಾರದೇ

ಹೋಗಬಹುದೇನೋ ಆದರೆ

ಅರಳದೆ ಹೊದೀತೆ

ಭರವಸೆಯದೊಂದು ತಾವರೆ?

---

ಎಲ್ಲೋ ಸುರಿದ ಮಳೆಗೆ ನದಿ

ಕೆಂಪಾಗಿ ಮೈತುಂಬಿಕೊಂಡಂತೆ

ಎಲ್ಲೋ ಇರುವ ನಿನ್ನ ನೆನಪಾಗಿ

ನನ್ನ ಕಣ್ತುಂಬಿ ಬಂತು

---

ಮುಗಿದು ಹೋಗಲಿ ಬಿಡು

ಮುಗಿಯದೇ ಉಳಿದುಹೋದ ನೆನಪುಗಳು

ಮುಗಿವೆ ನಾ ಕೈಯನು

ಮರುಕಳಿಸದಿರು ಮತ್ತೆ

ಮುಂದಿನ ಜನುಮದಲಿ

ನೆನಪಾಗಿ ಕಾಡಲು

---

ಕಳೆದ ನಿನ್ನೆಯ ರಂಗಿನ್ನೂ ಮಾಸಿಲ್ಲ

ಈವತ್ತಿಗಾಗಲೇ ಹೊಚ್ಚ ಹೊಸ ಬಣ್ಣ

ಮುಂದೆ ಏನಿದೆಯೋ ಯಾರಿಗೂ ಗೊತ್ತಿಲ್ಲ

ನಾಳೆಯ ಕನಸಿನೋಕುಳಿ ತುಂಬಿದೆ ಕಣ್ಣ

ಕಾಡುವ ನಿನ್ನೆಯ ಯಾತನೆ ಇಂದಿಲ್ಲ

ವರ್ತಮಾನದ ಬಿಸಿಗೆ ಹಳೆಯದು ರದ್ದಿ

ನಾಳೆಯ ಯೋಚನೆಯು ಈಗಲೆ ಬೇಕಿಲ್ಲ

ಹೇಳಿ ಹೊಸತೇನಿದೆ ಈ ಕ್ಷಣದ ಸುದ್ದಿ

ಆದರೂ ಒಮ್ಮೊಮ್ಮೆ ಭೂತದಲಿ ಇಣುಕುತ್ತಾ

ಪಳೆಯುಳಿಕೆಗಳ ನಡುವೆ ಅಂಡಲೆವ ಚಾಳಿ

ಕಲಸಿ ಹೋದ ಬಣ್ಣಗಳ ಬೆದಕುತ್ತಾ

ಕಳೆದ ರಂಗು ಮತ್ತೆ ಸಿಗಬಹುದೇ ಹೇಳಿ

---

ಮನಸಿನ ಮುನಿಸೊಂದು ಮರಳುಗೂಡು

ಮನ್ನಿಸಿ ಮುನಿಸನ್ನು ಮರೆತುಬಿಡು

ಮನಸಾಗಿದೆ ಮಳೆಯಿಲ್ಲದ ಮರಳುಗಾಡು

ಮುಗುಳ್ನಗೆಯ ಮುಖಹೊತ್ತು ಮರಳಿಬಿಡು

---

ನೆನಪುಗಳ ಬಿಸಿಗಾಳಿ

ಹಗಲಿರುಳು ಬೀಸುತಿದೆ

ನಿನ್ನಾಗಮನದ ಮಂದಾನಿಲವ

ಮನವು ಬಯಸುತ್ತಿದೆ

ಪ್ರತಿಕ್ಷಣದ  ಪ್ರತೀಕ್ಷೆಯಲಿ

ಭಾವ ಬೇಸತ್ತಿದೆ

ಬಾ ಬಿರುಮಳೆಯಾಗಿ...

ಭರವಸೆಯ ಬೇರು ಸಾಯುತ್ತಿದೆ...

ನೀರೇ ಇಲ್ಲದೆ

ಓ ನೀರೆ ನೀನಿಲ್ಲದೆ....!!!

---

ಪ್ರಶಾಂತ ಕೊಳದ ಮೇಲೆ

ಕಲ್ಲು ಚಿಮ್ಮಿಸಿ

ಅದು ಕುಪ್ಪಳಿಸುವುದ ಕಂಡು

ಖುಷಿಪಡುವವರಿಗೆ

ಕೇಳಿಸಿದರೂ ಅರ್ಥವಾದೀತೇ...?

ಕೊಳದ ಆಂತರ್ಯದಲಿ

ಉದ್ಭವಿಸುವ ತಳಮಳಗಳು

ಅಲೆಅಲೆಯಾಗಿ ದಡಕ್ಕಪ್ಪಳಿಸುವ

ನಿಟ್ಟುಸಿರಿನಂತಹ

ನಿರರ್ಥಕ ಸದ್ದುಗಳು !!

---

ನಿನ್ನ ಪ್ರೇಮ ಯಾಚಿಸಿ ನಾ

ಅದೆಷ್ಟು ಪೋಸ್ಟ್ ಮಾಡಿದೆ

ಫೋನ್ ಮಾಡಿದೆ

ನಿನ್ನ ಉತ್ತರವನ್ನೇಕೆ ಗೆಳತಿ

ನೀ ಪೋಸ್ಟ್ ಫೋನ್ ಮಾಡಿದೆ

---

ನಿನ್ನ ನಿರಾಕರಣದ

ಸುತ್ತಿಗೆಯೇಟಿಗೆ

ನನ್ನೆದೆಯಲಿ ನೆಟ್ಟು ಹೋದ

ನೆನಪಿನ ಮೊಳೆಗಳು

ಚುಚ್ಚುತಲೇ ಇವೆ...

ಬಿಟ್ಟೂ ಬಿಡದೇ

ಕ್ಷಮಿಸೋಣವೆಂದು ನಾ

ಹೆಣಗಿದೆ ಏಸೋ

ಕ್ಷಮಿಸು...

ನಾ ಆಗಲಾರೆ ಯೇಸು

---

ಹಳೆಯ ನೆನಪುಗಳನೆಲ್ಲಾ ಗೋರಿ ಗೋರಿ

ಕಟ್ಟಬೇಕಿದೆ ನೆನಪಿನ ಕಣಜಗಳ ಗೋರಿ

ಬಾಚಿದಷ್ಟೂ ಮುಗಿಯುತ್ತಿಲ್ಲ ಸ್ಮೃತಿಗಗಳ ಕಂತೆ

ಸಂತೆಯ ನಡುವೆ ನಿಂತೆ ಏಕಾಂಗಿಯಂತೆ (ವಿ.ಸೂ..ಗೋರಿ-ಗೋರಿ=ಬಾಚಿ)

'ನ' ಮತ್ತು 'ದ' ಅಕ್ಷರಗಳ ಕಾಗುಣಿತ .... ಹೀಗೊಂದು ಕವನವಲ್ಲದ ಕವಿತಾ...

ನಾ ನಿನ್ನೆ... ನಿನ್ನ ನೆನೆದೆ....

ನೀನಾದೆ ನನ್ನೆದೆ ದನಿ.....

ನನ್ನ ನಾದ....

ದಿನಾ ನಿನ್ನದೇ ನಿನಾದ...

ನೀನೇನಾದೆ...ನನ್ನ ನೆನೆ-ನೆನೆದು.....?

ನಿನ್ನದೂ ನಂದೇ ನಾದ?

ನನ್ನೆದೆ ನಂದನದಿ

ನೀನೊಂದು ನದಿ....

ನದಿ ನೀನಾದೆ....

ನಾನೇನಾದೇ....

ನದಿ ದನಿ...ನಾನಾದೆ...

ನಾನೇ ನಾನಾದೆ....

---

ಮನಸಿನ ಮುನಿಸೊಂದು ಮರಳುಗೂಡು
ಮನ್ನಿಸಿ ಮುನಿಸನ್ನು ಮರೆತುಬಿಡು
ಮನಸಾಗಿದೆ ಮಳೆಯಿಲ್ಲದ ಮರಳುಗಾಡು
ಮುಗುಳ್ನಗೆಯ ಮುಖಹೊತ್ತು ಮರಳಿಬಿಡು

---

ನಿನ್ನೆಯ ನೆನಪುಗಳ ಗಲ್ಲಿಗಳಲಿ
ನಿನ್ನಯ ನಿರೀಕ್ಷೆಗಳ ನಾಳೆಗಳಲಿ
ಸರಿದು ಹೋಗುತಿದೆ ಸದ್ದೇ ಇಲ್ಲದೆ...
ನಿಲ್ಲದೇ ನೀ-ನಿಲ್ಲದೇ ವರ್ತಮಾನ
ಹಿಡಿಯಷ್ಟು ಪ್ರೀತಿ ಬಯಸಿ
ಕೈಚಾಚಿದೆ ನಿನ್ನೆದುರು ಸಖಿ
ಬೊಗಸೆಯಷ್ಟು ಕಂಬನಿ ತುಂಬಿಸಿ
ನಿನ್ನ ಲೋಕದಿ ನೀನು ಸುಖಿ

---

ಹೇಳದೆ ಕೇಳದೆ
ಎದೆಯ ಕೊಳದೊಳಗಿಳಿದು
ಜೊತೆಯಲೇ ನನ್ನನೂ
ಪ್ರೀತಿಯಾಳಕ್ಕೆಳೆದು
ನಡುನೀರಲಿ ನನ್ನ
ಬಿಟ್ಟು ಹೋದ ನೀರೆ
ನಿನ್ನ ಪ್ರೀತಿ ಬಯಸಿದ ನನಗೆ
ಮುಳುಗು ನೀರೆ?

---

ನನ್ನೆದೆಯ ಮಹಲಿನ
ಮಜಲುಗಳ ತುಂಬೆಲ್ಲಾ
ನಿನ್ನ ನೆನಪುಗಳ
ಕಾಲ್ಗೆಜ್ಜೆ ದನಿಯ ಗಝಲು!!

---

ಪ್ರಾಣದ ಪ್ರಾಣವಾದವಳೇ
ಕನಸಲ್ಲಿ ಬಂದು ಕೊಲ್ಲುವವಳೇ
ನೆನಪಾಗಿ ಕಾಡೋದಕ್ಕಿಂತಾ
ಮಾಡ್ಕೊಳ್ಳೇ ನನ್ನೇ ನೀ ಸ್ವಂತಾ

---

ಕನಸುಗಳ ಯಾರೂ ಕೊಲ್ಲಲಾಗದು

ಕನವರಿಕೆಗಳಾಗಿ ಕಾಡುತಾವೆ

ನೆನಪುಗಳ ಗವಿಯೊಳಗೆ ಪಳೆಯುಳಿಕೆಯಾಗುಳಿವವು

ಕನಸುಗಳ ಕೊಳ್ಳಲೂ ಆಗದು

ಮನಸುಗಳ ಸಂತೆಯೊಳಗೆ

ಬಿಕರಿಗಿಲ್ಲದ ಮಾಲುಗಳಂತೆಯೇ ಅವೂ

---

ನಿನ್ನೆಯ ನವಿರು ನೆನವಿರಿಕೆ

ಕಾಣದ ಕನಸಿನ ಕನವರಿಕೆ

ಬತ್ತದ ಭಾವಗಳ ಬಾಯಾರಿಕೆ

ಮನಸಿನ ಮರದೆಲೆಗಳ ಮರ್ಮರಕೆ

ಕಂಗಳ ಕೊಳದೊಳಗೆ

ಹನಿಗಳ ಹಳಹಳಿಕೆ

ಪದಗಳಾಗಿವೆ...ಪಾಪ ಪಳೆಯುಳಿಕೆ !!

---

ನೀ ಬರದೆ ಹೋದ ಹಾದಿಯಲಿ

ನಿನ್ನ ಹೆಜ್ಜೆ ಗುರುತು ಅರಸುತ್ತಾ

ಗೆಜ್ಜೆ ದನಿಗೆ ಕಿವಿಯಾಗುವಾಸೆ

ನೀ ಬರೆಯದೇ ಹೋದ ಸಾಲಿನಲ್ಲಿ

ನಿನ್ನ ಎದೆಯ ಮಿಡಿತ ಹುಡುಕುತ್ತಾ

ಕಣ್ಣ ಹನಿಗೆ ಕವಿಯಾಗುವಾಸೆ !!

---

ಕನಸು ನನಸು

ನಡುವೆ...

ಮುನಿಸಿನ ಸಂಕಟ

ಒಲವಿಗೆ ಕಂಟಕ

ಮುಚ್ಚುವೆಯಾ ಮನ್ನಿಸಿ

ಮರೆತು

ಮನಿಸಿನ ಕಂದಕ

---

ನಿನ್ನ ಪ್ರೀತಿಯ ಕೋಟೆಯೊಳಗೆ

ಸುರಕ್ಷಿತ ಅಂದುಕೊಂಡಿದ್ದೆ...

ಒಳಗೇ ಹೆಡೆಯೆತ್ತಿದ ನಿನ್ನ

ವಿದ್ರೋಹದ ಅರಿವಾಗುವ ತನಕ !

---

ನಿನ್ನ ನಂಬಿಕೆದ್ರೋಹಕ್ಕೆ

ಶಿಕ್ಷೆ ಕೊಡಿಸೋಣ ಅಂದುಕೊಂಡರೆ

ಸಾಕ್ಷಿ ತರಲೆಲ್ಲಿಂದ ಹೇಳು?

ನಿನ್ನ ಅಂತಃಸಾಕ್ಷಿಗಿಂತ

ಅನ್ಯ ಸಾಕ್ಷಿಯು ಬೇಕೆ

ಏಕಾಂತದಲೊಮ್ಮೆ ಕಿವಿಗೊಟ್ಟು ಕೇಳು

---

ಏನೈತಿ ಮನದೊಳಗ ಏನೈತಿ?

ಹ್ಯಾಂಗೆ ಹೇಳಲಿ ನಾ ಮನದೊಳಗ

ಏನೈತಿ... ಏನೇನೈತಿ...

ಬರೀ ಪೇನ್ ಐತಿ ಪೇನ್ ಐತಿ... :-)

---

ಹನಿಯಾಗಿ ಸುರಿದಷ್ಟೂ

ಖಾಲಿಯಾಗುತ್ತಿಲ್ಲ

ಮನದಾಳದ ಗಮ

ಅಗಿಯುತ್ತಲೇ ಇದ್ದೇನೆ

ಮೆಲುಕು ಹಾಕುತ್ತಾ

ಸವಿಹೋದ ಚ್ಯೂಯಿಂಗ್ ಗಮ್ :-)

---

ಕನ್ನಡ ತಮಿಳು ಎಲ್ಲಾ ಬಿಡಿ

ಶಾಸ್ತ್ರೀಯ ಸ್ಥಾನಮಾನ ನಂಗೇ ಕೊಡಿ

ನನಗಿಂತ ಪ್ರಾಚೀನ ಇದೆ ಯಾವ ನುಡಿ

ಎಂದಿತು ನಲ್ಲೆಯ ಕಣ್ಣೋಟದ ಕುಡಿ :-)

---

ಮನದ ಮೌನದ ಮುಸುಕಿನೊಳಗೆ
ಕನಸು ಕಾಣುವ ಕಂಗಳೊಳಗೆ
ಹುಗಿದು ಹೋಗಿದೆ ಹೃದಯದೊಳಗೆ
ಹೊರ ಹೊಮ್ಮದ ಹಾಡೊಂದು

ನಿನ್ನ ನಲ್ಮೆಯ ನವಿರು ನೆನಪಲಿ
ಬಣ್ಣವಿಲ್ಲದ ಬದುಕ ಭಿತ್ತಿಯಲಿ
ಕಣ್ಣಂಚಿನ ಕೊಳ ಕೋಡಿಯಾಗಿದೆ
ಮಳೆಯಾಗದೇ ಮುಗಿಲ ಮೋಡವೊಂದು

---

ನಿಶ್ಯಬ್ಧ ನಿಶೆಯೊಳಗೆ
ಮೌನದ ಮುಸುಕೊಳಗೆ
ಸದ್ದಿಲ್ಲದ ಸುದ್ದಿಯೊಂದು
ಕನಸಾಗಿ ಕಾಡುತಿದೆ

ನವಿರಾದ ನೆನಪಿಂದ
ಬಸಿರಾಗಿ ಭಾವಗಳು
ಕಣ್ಣಿಂದ ಕುಡಿಯೊಡೆದು
ಹನಿಯಾಗಿ ಹರಿಯುತಿವೆ

---

ಅವನಿಯ ಅಧರ
ಚುಂಬಿಸುವ ಹೂ ಮುತ್ತು
ಕಲ್ಪನೆಗೇ
ಮುಗಿಲು ನಾಚಿ ನೀರ ಹನಿಯಾಗಿ ಬಿತ್ತು

---

ಹನಿಗಳು ಅಂದ್ರೆ
ತಮಾಷೆಯಲ್ಲ
ಪದಗಳ ಜೋಡಿ
ಚೌಕಾಶಿಯಲ್ಲ
ಮನದಾಳದ ಅಳಲಿಗೆ
ಅಕ್ಷರ ರೂಪ
ಸುಪ್ತ ಸ್ವರಗಳ
ಗುಪ್ತ ರಾಗಾಲಾಪ

---

ಸಖಿ, ನಿನ್ನ ವಿಲಾಸಕೆ ಮನಸೋತು

'ವಿಳಾಸ'ವಿಲ್ಲದಂತಾದೆ

ನಿನ್ನ ಉಸಿರಲಿ ಉಸಿರಾದೆ ನೋಡು

ಹೇಳ ಹೆಸರೇ ಇಲ್ಲದಂತಾದೆ...!!

---

ಕವಿತೆ ಕುಡಿಯೊಡಯಬೇಕು

ಕಾನನದಿ ಕವಿದ ಕತ್ತಲೆಯೊಳಗೆ ಕಣ್ದೆರೆದು

ರಾತ್ರಿ ಮೊಗ್ಗಾಗಿದ್ದ ಮಲ್ಲಿಗೆ

ಮುಂಜಾವದ ಮಂಜಲಿ

ಮೆಲ್ಲನೆ ಮುಗುಳ್ನಕ್ಕಂತೆ...

ನಟ್ಟಿರುಳ ನಿದ್ದೆಯಲ್ಲಿಯೂ

ನೆಪವಿಲ್ಲದೆ ನಿನ್ನ

ನಗೆಯ ನೆನಪಾದಂತೆ...

ಬಲವಂತಕೆ ಬಸಿರ ಬಗೆದರೆ

ಬಿಡುಗಡೆಯಲ್ಲವದು...

ಭ್ರೂಣ ಹತ್ಯೆ

ವ್ಯತ್ಯಾಸ ಇಷ್ಟೇ...

ಒಲುಮೆಯ ತುದಿಬೆರಳ

ಸ್ಪರ್ಶದ ನವಿರು ಪುಳಕ

ತೆವಲು-ತೀಟೆಗೆ ತಡಕಾಡುವ

ಕರಗಳ ಚಳಕ

---

ಸಪ್ತವರ್ಣದ ರಂಗುರಂಗಲಿ

ಸುಪ್ತವಾಗಿಹೆಯಾ ನೀನು ರಂಗೋಲಿ

ಲುಪ್ತವಾಗಿಹ ಹೊನಲ ಸೆಲೆಯಲಿ

ಗುಪ್ತಗಮನದಿ ಹರಿವ ಹೊಳೆಯೇ ನೀ?

ವ್ಯಕ್ತವಾಗದ ಮನದ ನುಡಿಯಲಿ

ಅವ್ಯಕ್ತವಾಗಿಹ ಯಾವ ಪದವೇ ನೀ

ಸಪ್ತಸ್ವರಗಳ ಲಯದ ಮಿಡಿತದಿ

ಆಪ್ತವಾಗುವ ಸ್ವರದ ಪಲುಕೇ ನೀ?

ಮೊದಲ ಮಳೆಯ ಹನಿಗೆ ಹೊಮ್ಮುವ

ಮೃದುಲ ಘಮಲು ಗಮವೇ ನೀ

ತೊದಲ ನುಡಿ ಆಡುವ ಹಸುಳೆಯ

ಹವಳ ತುಟಿಯ ನಗುವೇ ನೀ?

---

ನಲಿವಿನಾ ಇರುಳು ಸರಿಯುತಿದೆ

ಅರಿವಿಲ್ಲ ನೀ ಎಂದು ಬರುವೆ

ಜಗವೆಲ್ಲಾ ಋತು ಬದಲಾಯಿಸಿದೆ

ಅರಿವಿಲ್ಲ ನೀ ಎಂದು ಬರುವೆ

ಮೋಹಕ ದೃಶ್ಯಗಳಾ ಮೆರುಗು

ಕಳೆದು ಉರುಳಿ ಹೋಗುತಿವೆ

ತಾರೆಗಳ ಕಾಂತಿಯ ಹೊಳಪೆಲ್ಲಾ

ಮಿನುಗಿ ಮರೆಯಾಗಿದೆ

ಸಕಲ ಜ್ವಾಲೆಗಳು ಉರಿದ್ಹೋಗುತಿವೆ

ಅರಿವಿಲ್ಲ ನೀ ಎಂದು ಬರುವೆ

ಚಡಪಡಿಸುತಿಹೆ ನಾನಿಲ್ಲಿ

ನಿನ್ನಾಗಮನದ ಪ್ರತೀಕ್ಷೆಯಲ್ಲಿ

ವಸಂತದ ವರ್ಣದ ಮೆರುಗೆಲ್ಲಾ

ಆವರಿಸಿದೆ ಪ್ರಕೃತಿಯೆಲ್ಲಾ

ಬದಲಾಗಿದೆ ಬೀಸೋ ಗಾಳಿಯಾ ದಿಶೆ

ಅರಿವಿಲ್ಲ ನೀ ಎಂದು ಬರುವೆ

---

ನಾನೇ ನೀನಾಗಿ

ನಿನ್ನದೇ ನೆರಳಾಗಿ

ನೆಲೆಸುವೆ ನಿನ್ನೆದೆಯ

ನಿನಾದದಿ...

ನಾನಿಲ್ಲವಾದರೆ

ನೋಯದಿರು ನನಗಾಗಿ

ನವಿರಾದ ನೆನಪಾಗಿ

ನಾನಿಲ್ಲುವೆ...!!

---

**ಇಕ್ ಪ್ಯಾರ್ ಕಾ ನಗಮಾ ಹೈ…ಮೌಜೋಂ ಕಿ ರವಾನಿ ಹೈ… ಭಾವಾನುವಾದದ ವ್ಯರ್ಥ ಪ್ರಯತ್ನ ☺**

ಒಂದು ಪ್ರೇಮ ಪಲ್ಲವಿಯ ಪಲುಕಿದು… ಭಾವ ಲಹರಿಯ ಝರಿಯಿದು…

ಬಾಳಿನರ್ಥ..ಬೇರೇನಲ್ಲ…ನನ್ನ ನಿನ್ನ ಕಥೆಯೇ ಎಲ್ಲಾ

ಒಂದು ಪ್ರೇಮ ಪಲ್ಲವಿಯ ಪಲುಕಿದು….||

ಏನೋ ಗಳಿಸಲೆಂದು ಕಳಕೊಂಡು… ಕಳೆದುಕೊಂಡು ಮತ್ತೆ ಗಳಿಸಲೆಂದು

ಬಾಳಿನರ್ಥದ ಸಾರ… ಬಂದು ಹೋಗೋ ನಡುವೆ ವ್ಯಾಪಾರ

ಎರಡು ಕ್ಷಣಗಳ ಬಾಳಿಂದ… ಕದ್ದು ಬಾಳಬೇಕಿದೆ ಖುಷಿಯಿಂದ.

ಬಾಳಿನರ್ಥ..ಬೇರೇನಲ್ಲ…ನನ್ನ ನಿನ್ನ ಕಥೆಯೇ ಎಲ್ಲಾ

ಒಂದು ಪ್ರೇಮ ಪಲ್ಲವಿಯ ಪಲುಕಿದು….||

ನೀ ನದಿಯ ಧಾರೆಯಾದರೆ… ದಂಡೆ ನಾ – ನಿನ್ನ ತಬ್ಬಿದಾ ಧರೆ,

ನೀಡು ನೀ ನನಗಾಸರೆ… ನಾನಿಹೆನಲ್ಲ ನಿನಗಾಸರೆ

ಕಣ್ಣ ನಡುವೆ ಒಂದು ಕಡಲು… ಬಯಕೆಯ ನೀರಿಂದ ತುಂಬಿದೆ ಒಡಲು

ಬಾಳಿನರ್ಥ..ಬೇರೇನಲ್ಲ,..ನನ್ನ ನಿನ್ನ ಕಥೆಯೇ ಎಲ್ಲಾ

ಒಂದು ಪ್ರೇಮ ಪಲ್ಲವಿಯ ಪಲುಕಿದು….||

ಬಿರುಗಾಳಿಯೇ ಬರಲಿ ಬಿಡು… ಬಂದು ಮರಳೋದು ಖಚಿತ ಬಿಡು

ಈ ಮೋಡಗಳ ಆಟ ಎಷ್ಟೊತ್ತು… ದ್ರವಿಸಿ ಮಳೆ ಸುರಿಯೆ ಮುಗಿದೋಯ್ತು

ಬಾಳಿನರ್ಥ..ಬೇರೇನಲ್ಲ,..ನನ್ನ ನಿನ್ನ ಕಥೆಯೇ ಎಲ್ಲಾ

ಒಂದು ಪ್ರೇಮ ಪಲ್ಲವಿಯ ಪಲುಕಿದು….||

**ಮೂಲ ಗೀತೆ**

ಇಕ್ ಪ್ಯಾರ್ ಕಾ ನಗಮಾ ಹೈ…ಮೌಜೋಂ ಕಿ ರವಾನಿ ಹೈ

ಜಿಂದಗೀ ಔರ್ ಕುಚ್ ಭೀ ನಹಿ…ತೇರಿ ಮೇರಿ ಕಹಾನಿ ಹೈ

ಇಕ್ ಪ್ಯಾರ್ ಕಾ ನಗಮಾ ಹೈ…||

ಕುಚ್ ಪಾಕರ್ ಖೋನಾ ಹೈ...ಕುಚ್ ಖೋಕರ್ ಪಾನಾ ಹೈ

ಜೀವನ್ ಕಾ ಮತಲಬ್ ತೊ...ಆನಾ ಔರ್ ಜಾನಾ ಹೈ

ದೋ ಪಲ್ ಕೆ ಜೀವನ್ ಸೆ...ಎಕ್ ಉಮ್ರ್ ಚುರಾನಿ ಹೈ

ಜಿಂದಗೀ ಔರ್ ಕುಚ್ ಭೀ ನಹಿ...ತೇರಿ ಮೇರಿ ಕಹಾನಿ ಹೈ

ಇಕ್ ಪ್ಯಾರ್ ಕಾ ನಗಮಾ ಹೈ...||

ತೂ ಧಾರ್ ಹೈ ನದಿಯಾ ಕಿ...ಮೈ ತೇರಾ ಕಿನಾರ ಹೂಂ

ತು ಮೇರಾ ಸಹಾರಾ ಹೈ... ಮೈ ತೇರಾ ಸಹಾರಾ ಹೂಂ

ಆಂಖೋಂ ಮೆ ಸಮಂದರ್ ಹೈ...ಆಶಾವೋಂ ಕಾ ಪಾನಿ ಹೈ

ಜಿಂದಗೀ ಔರ್ ಕುಚ್ ಭೀ ನಹಿ...ತೇರಿ ಮೇರಿ ಕಹಾನಿ ಹೈ

ಇಕ್ ಪ್ಯಾರ್ ಕಾ ನಗಮಾ ಹೈ...||

ತೂಫಾನ್ ತೊ ಆನಾ ಹೈ...ಆಕರ್ ಚಲೇ ಜಾನಾ ಹೈ

ಬಾದಲ್ ಹೈ ಯೆ ಕುಚ್ ಪಲ್ ಕಾ...ಚಾಕರ್ ಡಲ್ ಜಾನಾ ಹೈ

ಪರಚಾಯಿಯಾ ರೆಹ್ ಜಾತಿ...ರೆಹ್ ಜಾತಿ ನಿಶಾನಿ ಹೈ

ಜಿಂದಗೀ ಔರ್ ಕುಚ್ ಭೀ ನಹಿ...ತೇರಿ ಮೇರಿ ಕಹಾನಿ ಹೈ

ಇಕ್ ಪ್ಯಾರ್ ಕಾ ನಗಮಾ ಹೈ...||

---

ಬೂದಿಯಾಗಲಿ ನೆನಪು ಅಂತ

ಭಾವನೆಗಳಿಗೆ ಬೆಂಕಿ ಇಟ್ಟೆ

ಇಲ್ಲವಾಗಲಿ ಆಸೆ ಅಂತ

ಕನಸುಗಳಿಗೆ ಕೊಳ್ಳಿ ಇಟ್ಟೆ

ಆದರೆ ಕೊನೇಲಿ ಆಗಿದ್ ಇಷ್ಟೇ...

ಕನಸುಗಳು ಕೆಂಡವಾಗಿ

ಭಾವನೆಗಳು ಬೂದಿಯಾಗಿ

ನೆನಪುಗಳ ಹೊಗೆ ನನ್ನ ಆವರಿಸಿತಷ್ಟೇ...!!

---

ಓ ತರಳೆ...

ನಿನ್ನ ಪ್ರೇಮ ಸುಳಿಗಾಳಿ

ನಾನದಕೆ ಸಿಕ್ಕಿಬಿದ್ದ ತರಗೆಲೆ

ಎಲ್ಲಿಗೊಯ್ಯುವುದೋ ಅರಿಯೆ

ನೆನಪಿನ ಚಕ್ರಸುಳಿ

ಇನ್ನೆಷ್ಟು ಹೊತ್ತು ತಿರುಗಲೇ ?!!

---

ಅಂದು ಮಳೆಯಾಗಿ

ಭೋರ್ಗರೆಯದೇ

ಹೋದ ತಪ್ಪಿಗೆ

ಇಂದು ಹನಿಹನಿಯಾಗಿ ಸುರಿದು

ಭಾವಗಳ ತಪ್ಪೊಪ್ಪಿಗೆ

---

ಗೆಳತೀ ನಿನ್ನ ಮೇಲಿನ ಮೋಹ

ಇರಬೇಕು ಮಧುಮೇಹ...!!

ಒಮ್ಮೆ ಅಂಟಿಕೊಂಡರೆ

ಜನ್ಮಪೂರ್ತಿ ಹಿಂಬಾಲಿಸುತ್ತದೆ...

ಹೊರಗೆ ಕಾಣಿಸದೆ ಇದ್ದರೂ...

ಜೀವದೊಳಗೇ ಇದ್ದು... 

---

ಮಾಡಿಲ್ಲ ಕವನ ಪೂರ್ತಿ

ಎಲ್ಲಿ ಮರೆಯಾದೇ ನೀ ಸ್ಫೂರ್ತಿ

ಕನಸಲ್ಲಾದ್ರೂ ಒಂದು ಸರ್ತಿ

ಕಾಯ್ತೀನಿ ಬಾರೇ ಮಾರಾಯ್ತಿ

---

ಹೇಗೆ ತಿಳಿಯಿತು ನನ್ನ ಮನದ ಪ್ರೀತಿ

ಬೇಗ ಕಲಿಸಿಕೊಡು ಮನಗೆಲ್ಲುವ ರೀತಿ

ಹೇಗೆ ಓದುವುದು ಕಣ್ಣೋಟದಾ ಸಂಚು

ಎಂತು ಗುರುತಿಸುವುದು ಪ್ರೀತಿಯ ಸುಳಿಮಿಂಚು

ತಿಳಿಸಿ ಹೇಳುವೆಯಾ ಪ್ರೀತಿ ಗೆಲ್ಲೋ ಕಲೆ

ಬಿಡಿಸಿ ತೋರುವೆಯಾ ಪ್ರೀತಿ ಉಕ್ಕೋ ಸೆಲೆ

---

ಬರೆದೆ ನಾನೊಂದು

ಒಲುಮೆಯ ಪದ್ಯ

ಮನದ ನೂರು ಮಾತು

ಆಗುವಂತೆ ಹೃದ್ಯ

ಯಾರಿಗೂ ಗೊತ್ತಿಲ್ಲ

ಸ್ಪೂರ್ತಿ ಯಾರೆಂದು ಸದ್ಯ

ಹಾಡಿನೆಲ್ಲಾ ಸಾಲಲ್ಲೂ

ನೀನೇ ಇದ್ಯಾ?

---

ಅವನು ಅವನಿಯ ಕಾದು

ಅವನಿ ಅವನ ಕಾದರೂ

ಅವನವನಿಗೆ ಸಿಗಲಿಲ್ಲ

ಅವನಿಯವನಿಗೆ ಸಿಗಲೇ ಇಲ್ಲ

---

ಬುದ್ಧನಾಗೋದು ಅಂದ್ರೆ ಮುಗ್ಧನಾಗೋದು

ಸದ್ದಿಲ್ಲದೆ-ಸುದ್ದಿ ಮಾಡದೆ ಶುದ್ಧನಾಗೋದು

ಜಿದ್ದಿಲ್ಲದೆಗುದ್ದಾಡದೆ ಕಾರ್ಯ ಮಗ್ನನಾಗೋದು

ಗೆದ್ದರೂಬಿದ್ದರೂ ಅಲುಗದ ಪ್ರಬುದ್ಧನಾಗೋದು

---

ಎದೆಯ ನೂರು ಭಾವಗಳಲಿ

ಯಾವುದನು ಬಚ್ಚಿಡಲಿ

ನೆನಪು ಬುತ್ತಿಗಂಟಿನಿಂದ

ಏನನು ಬಿಚ್ಚಿಡಲಿ

ಮನಸು-ಭಾವ ಎಲ್ಲಾ ನೀನೇ

ಎಷ್ಟು ದಿನ ಮುಚ್ಚಿಡಲಿ

ಹೇಳೇ ಸಖಿ ಎನಿತು ಕಾಲ

ಎದೆಯಾಸೆಗೆ ಕಿಚ್ಚಿಡಲಿ

ಇಂದಲ್ಲಾ ನಾಳೆ ನೀ

ಬರುವೆಯೆಂಬ ನೆಚ್ಚಿನಲಿ... ಹುಚ್ಚಿನಲ್ಲಿ...

---

ಕವಿತೆಯ ಹೂರಣದಂತವಳೇ ಕೇಳು

ಬದುಕು ಹಾಡಾಗುವ ಬಗೆ ಏಳೇ ಏಳು...

ಸಂತೋಷ ಉಕ್ಕುವಾಗ

ನೆನಪುಗಳ ಹೆಕ್ಕುವಾಗ

ಬಯಸಿದ್ದು ಸಿಕ್ಕಿದಾಗ

ಅಳುವಿಂದ ಬಿಕ್ಕುವಾಗ

ಸಿಟ್ಟನ್ನು ಕಕ್ಕುವಾಗ

ಭಾವನೆಗಳು ಸೊಕ್ಕುವಾಗ

ಮತ್ತು...

ನಿನ್ನ ಮೋಸ ನನ್ನ ಕುಕ್ಕುವಾಗ

---

ಅಂಡಲೆಯೋ ಬದುಕಿನ ಅಬ್ಬೇಪಾರಿ ಪಾತ್ರ

ಹರಿದರೂ ತುಂಡಾಗದ ಯಾವುದೀ ಸೂತ್ರ

ಹೇಳೋಕೇನೋ ವೇದಾಂತ ನೀರ ಮೇಲಣ ಗುಳ್ಳೆ

ಇಷ್ಟಾದರೂ ಕೊನೇ ತನಕ ಬಡಿದಾಟ ಸುಳ್ಳೆ?

ಪರಮಾರ್ಥ-ಪುರುಷಾರ್ಥ ಆಗೋಲ್ಲ ಅರ್ಥ

ಉಸಿರಿರೋ ತನಕ ಜಾರಿಯಲಿ ನಮ್ಮೆಲ್ಲ ಸ್ವಾರ್ಥ

---

ಚುಕ್ಕಿಯಿಟ್ಟು ಅಳಿಸಿಬಿಟ್ಟೆ

ಒಲವಿನ ರಂಗವಲ್ಲಿ

ನಿಲ್ಲಿಸಿ ಹೋದೆ ಕೊಳಲನು ಬಿಸುಟು

ಹಾಡಿನ ನಡುವಲ್ಲಿ

ಅರಳುವ ಮೊದಲೇ ಬಾಡಿತು ಏಕೆ

ನಲ್ಮೆಯ ಹೂ-ಗಿಡ-ಬಳ್ಳಿ

ಆರಿಸಿದೆ ನೀ ಪ್ರೀತಿಯ ಸೊಡರನು

ನಿಶೆಯ ನಟ್ಟಿರುಳಲ್ಲಿ

ಆದರೂ ಒಂದು ತುಣುಕು ಆಸೆ

ಭರವಸೆ ನನ್ನೆದೆಯಲ್ಲಿ

ಸಿಗಲಾರೆಯಾ ನೀ ಇಂದಲ್ಲವಾದರೂ

ಮುಂದಿನ ಜನುಮದಲ್ಲಿ

---

ಸದ್ದಿಲ್ಲದೇ ಕಣ್ಣು ತೋಯಿಸಿದ

ರಾತ್ರಿಯ ಮರೆತಿಲ್ಲ

ಸುದ್ದಿಯಿಲ್ಲದೆ ನನ್ನ ದಹಿಸಿದ

ಪ್ರೀತಿ ಸತ್ತಿಲ್ಲ

ಬದುಕಿಹೆನೋ ಸತ್ತಿರುವೆನೋ

ನಂಗೇ ಗೊತ್ತಿಲ್ಲ

ಕೇಳೋಣ ಅಂದ್ರೆ ಸಖಿ

ನೀನೇ ಸಿಕ್ಕಿಲ್ಲ

---

ನಿನ್ನ ಎದೆತೋಟದ ಮಾಲಿಕನಾಗೋ

ಭಾಗ್ಯ ಇಲ್ಲದಿರೇನಂತೆ

ಇರಬೇಕೆಂಬಾಸೆ ಅದ ಕಾಯುವ

ಮಾಲಿಯಾಗಿ

ಧನ್ಯನಾಗುವೆ ನಗುವ ಹೂವ ಕಂಡಾದರೂ

ಅನವರತ ರಕ್ಷಿಸುವ ಬೇಲಿಯಾಗಿ

---

ಹೂತು ಹೋದೆ ನಾ-

ನಿನ್ನ ಕಣ್ಣ ಕುಡಿನೋಟದಲಿ

ಕಲೆತು ಕಲಿತ ಹುಡುಗಾಟದಲಿ

ರಸಕ್ಷಣದ ಸವಿ ಬೇಟದಲಿ

ಬೇಸತ್ತು ಹೋದೆ ನಾ-

ಕಾಡುವ ನೆನಪುಗಳ ಕಾಟದಲಿ

ಪ್ರೀತಿ ಕಲಿಸಿರುವ ಪಾಠದಲಿ

ಅಲೆಮಾರಿಯಂತೆ ಹುಡುಕಾಟದಲಿ

ಸೋತು ಹೋದೆ ನಾ-

ಬಾಳ ಹಾವೇಣಿ ಆಟದಲಿ

ದಾಳ ಪಗಡೆಗಳ ಹೂಟದಲಿ

ಗುರಿಯಿಲ್ಲದ ನಾಗಾಲೋಟದಲಿ

---

ಕನಸಲ್ಲಿ ಬರುವ ಬೆಡಗಿಯರೇ

ನಿಜದಿ ಎದುರಾಗಬೇಡಿ

ನಿರೀಕ್ಷೆಗಳಲ್ಲಿರುವ ಸುಖವ

ಹುಸಿಯಾಗಿಸಬೇಡಿ

---

ಎಲ್ಲೋ ಯಾರೋ ಏಕೋ ಹೇಗೋ ಇಷ್ಟವಾಗಿ

ಕಣ್ಣ ಮಾತು - ಅದುರೋ ಅಧರದಿಂದ ಸ್ಪಷ್ಟವಾಗಿ

ಮನದ ಮುಗಿಲಲಿ ಈಗ ಗಾಳಿಪಟ

ಎದೆಯೊಳಗಿನ ಸಂಕೋಚವೀಗ ಧೂಳಿಪಟ

---

ಕಾಯಲಾರೆನು

ನೀ ಬರಲಿಲ್ಲವೆಂದು

ಸಾಯಲಾರೆನು

ನೀ ಸಿಗಲಿಲ್ಲವೆಂದು

ನೋಯಲಾರೆನು

ನೀ ತೊರೆದೆಯೆಂದು

ಮನಸಿಗೆ ಹೇಳಿರುವೆ

ನೀ ಬರುವೆಯೆಂದು

ಆ ನಿರೀಕ್ಷೆಯೂ ಇರದೆ

ಹೇಗಿರಲಿ ನಾನಿಂದು

---

ಕೃಷ್ಣನಿಗಾದರೆ ಖಂಡಿತಾ ಇಲ್ಲ

ಅಗಲುವಿಕೆ ವಿರಹದ ಬಾಧೆ

ರುಕ್ಮಿಣಿ-ಭಾಮೆ ಇಲ್ಲದೆ ಹೋದರೆ

ಕಾದಿರುವಳು ಒಬ್ಬ ರಾಧೆ

ನನ್ನ ಪಾಡೇನು ಹೇಳು ಸಖಿ

ಹಗಲಿರುಳು ನಿನಗಾಗಿ ಕಾದೆ

ಪಾಪಿಲೋಕದ ಮಂದಿ

ನಗೆಯಾಡುವಂತೆ ಮಾಡಿ

ನನ್ನ ನೀ ತೊರೆದು ಹೋದೆ

---

ನೆನಪಾಗುತಿದೆ ಮತ್ತೆ ಕಪ್ಪೆಚಿಪ್ಪು

ಚನ್ನೆಮಣೆಯ ಕರಿಮರದ ಕಪ್ಪು

ತೇಲಿ ಬರುತಲಿದೆ ಕಾಗದದ ದೋಣಿ

ಮೇಲೇರಿ ಕೆಳಗಿಳಿವ ಹಾವು-ಏಣಿ

ಬದುಕು ಖಂಡಿತಾ ಅಲ್ಲ ನೆನಪುಗಳ ಸಂತೆ

ಸಿಹಿ-ಒಗರು-ಹುಳಿ ಕಲಸು ಮೇಲೋಗರದಂತ

---

ನಿನ್ನ ನೆನಪುಗಳದೇ ಒಂದು

ವಿಶೇಷ ಪುರವಣಿ ತಂದರೂ

ಉಳಿದೇ ಹೋಗಿವೆ ಒಂದು

ವಿಶೇಷಾಂಕ ತುಂಬುವಷ್ಟು

---

ಗಾಳಿಪಟದಂತೆಯೇ

ಈ ಬದುಕು ಸಂಗಾತಿ

ಸೂತ್ರ ಹರಿದ ಮೇಲಷ್ಟೇ

ಅರಿವಾಗೋ ಸಂಗತಿ

ನಿನ್ನ ಕೈಗೆ ಒಪ್ಪಿಸಿದೆ

ಬದುಕಿನ ದಾರ

ನಡುವಲೇ ಕೈಬಿಟ್ಟು

ನೀ ನಡೆದೆ ದೂರ

ಹೇಗೆ ಕೊಡಲಿ ಹೇಳು

ಇನ್ಯಾರದೋ ಕೈಲಿ ಸೂತ್ರ

ನಂಬಿ ಕೆಟ್ಟರೂ ವಿಶ್ವಾಸ

ನಿನ್ನ ಮೇಲೆ ಮಾತ್ರ

---

ಹಳಿಯಬೇಡ ಗೆಳತಿ

ಹಳೆಯ ಹಳವಂಡಗಳ ನೆನೆದು

ಸುಳಿಯಬೇಡ ಗೆಳತಿ

ಮಳೆಯ ರಾತ್ರಿಯಲಿ ನೆನಪಾಗಿ ಕುಳಿತು

ಮರೆಯಬೇಡ ಗೆಳತಿ

ಕಳೆದುಹೋದ ಹಳೆಯ ಮೈತ್ರಿಯ ಕುರುಹು

---

ದೇವತೆಗಳಿರುವ ಬಗ್ಗೆ ಅನುಮಾನ ಜಾರಿ ಇದೆ

ರಾಕ್ಷಸಿಯರ ಕುರಿತು

ಅನುಮಾನವೇ ಇಲ್ಲ

ನೀನು ಕೊಂದ ನನ್ನ ಕನಸೇ

ಸಾಕ್ಷಿ ಇದೆ!!

---

ನೆನಪ ನೌಕೆಯ ಮೇಲೆ ದೂರ ತೀರದ ಯಾನ

ಎದೆಯ ಮಿಡಿತದಿ ಮಿಳಿತವಾಗಿ ಮೌನ

ಮನದ ಮೂಲೆಯ ಏಕತಾರಿಯು ನುಡಿಸಿದೆ

ಶೃತಿ-ಲಯಗಳ ಹಂಗಿಲ್ಲದ ಆತ್ಮಗಾನ

ಹೂತುಹೋಗಿದೆ ಮಾತು ಗಂಟಲಿನ ಗವಿಯಲಿ

ಅವಿತುಕೊಂಡಿದೆ ಭಾವ ಸಂಕೋಚದ ಮಡುವಲಿ

ಮಾತು-ಭಾವಗಳ ಹಂಗೇಕೆ ನಮ್ಮ ನಡುವಲಿ

ಇರುವಾಗ ನಾನಿನ್ನ ನೀನೆನ್ನ ಎದೆಯಲಿ

---

ಎಲ್ಲೂ ಹೋಗಿಲ್ಲ ನೀ ಇಲ್ಲೇ ಇರುವೆ

ಕವನದ ಪದಗಳಲ್ಲಿ

ನೆನಪಿನ ಪದರುಗಳಲ್ಲಿ

ಚಿತ್ರದ ಬಣ್ಣಗಳಲ್ಲಿ

ಚಿತ್ತದಿ - ಕಣ್ಮನದಲ್ಲಿ

ಹಾಡಿನ ಪಲ್ಲವಿಯಲ್ಲಿ

ಮನಸಿನ ತಲ್ಲಣದಲ್ಲಿ

ಕನಸಿನ ಕನ್ನಡಿಯಲ್ಲಿ

ಮಿಡಿಯುವ ನನ್ನೆದೆಯಲ್ಲಿ

ಕ್ಷಣಭಂಗುರ ಬದುಕಿನ ಸ್ಥಿರ ಚಿತ್ರವಾಗಿ

ಇರುವೆ ನೀ ಅವಿನಾಶಿ ಪಾತ್ರವಾಗಿ

---

ಇತಿಹಾಸದ ಪುಟ ಮಗುಚಿದರೆ

ಕಾಣುವುದು ರಕ್ತಪಾತ ಸಾವು-ನೋವು

ಅರಳಿದ್ದರೂ ಅರಳಿರಬಹುದು

ಒಂದಿಷ್ಟು ಪ್ರೀತಿಯ ಹೂವು

ನನ್ನ ಬದುಕಿನ ಇತಿಹಾಸವೂ

ಆದೀತಾದ್ರೂ ಹೇಗೆ ಬೇರೆ

ಆದರೂ ಪರಿಮಳ ಬೀರುತಿವೆ

ನೀನರಳಿಸಿದ (ನೀ-ನರಳಿಸಿದ)

ಹೂ-ಗಿಡ-ಬಳ್ಳಿ ನೀರೆ...

---

**ನೆನಪಿನ ಮಿಡಿ(ತ)ಗಳಿಗೆ ಖಾರ ಬೆರೆಸಿ !**

ಮನಸಿನ ಭರಣಿಯೊಳಗೆ

ಕಣ್ಣೀರಿನಲಿ ಉಬ್ಬೆ ಹಾಕಿಟ್ಟ

ನೆನಪಿನ ಮಿಡಿ(ತ)ಗಳನೆಲ್ಲಾ

ಆಗೀಗ ಆರಿಸಿ ಕೊಯ್ದು ಬಡಿಸುತ್ತೇನೆ

ಜೊತೆಗಿಷ್ಟು ಖಾರ ಬೆರಸಿ !

ಚಪ್ಪೆಯಾದೆ ನಾ... ಅದ ಚಪ್ಪರಿಸಿ

ವಾಹ್ ಎನ್ನುವವರ ಲೊಟ್ಟೆ ಸದ್ದಿಗೆ

ಬೆಪ್ಪಾಗಿ ಮನಕೆ ಸಂದಿಗ್ಧವೀಗ...

ಬರಿದೇ ಬೆನ್ನು ತಟ್ಟಿ(ಸಿ)ಕೊಳ್ಳಬೇಕೋ

ಆರದ ಒದ್ದೆ ಕಣ್ಣು ಒರೆಸಿಕೊಳ್ಳಬೇಕೋ!!

---

**ನಿಷಾದ ♪ ವಿಷಾದ ♫**

ನೆನಪಿನಾಳದ ಕಣಿವೆಯೊಳಗೆ

ಸುಪ್ತ ಝರಿಯ ಜುಳುಜುಳು ನಿನಾದ

ಅಂತರಂಗದ ಹೂಬನದೊಳಗೆ

ಅರಳಿ ನಗುವ ಸ್ಮೃತಿ ಸಂವಾದ

ಆಪ್ತಸ್ವರಗಳ ಆಲಾಪನೆಯೊಳಗೇ

ಲುಪ್ತವಾದ ನಿಷಾದ...ಸ್ವರದ ವಿಷಾದ !!

---

ನನಗೆ ನೀನು ನಿನಗೆ ನಾನೆಂದು

ನುಡಿದು ನನ್ನಲಿ ನಾನಿಲ್ಲದಂತಾಗಿ

ನಗುವಾಗ ನೀನಿದ್ದೆ ನನ್ನೆದೆಯಲಿ

ನವಿರಾದ ನವನೀತ ನಲ್ಮೆಯಾಗಿ

ನಿನಗೇನಾದರೆ ನನಗೇನೆಂದು

ನೀನಿಲ್ಲದೆಯೂ ನಾನಿರಬಲ್ಲೆನೆಂದು

ನುಡಿದು ನೋಯಿಸಿ ನನ್ನೆದೆಯಿಂದೆದ್ದೆ

ನೆನಪುಗಳ ನೂಕಿ ನುಚ್ಚುನೂರಾಗಿಸಿ

ನಾನಿಲ್ಲದೆ ನೀನಿರಬಹುದೇನೋ ನಲ್ಲೆ...

ನೀನಿಲ್ಲದೆ ನಾ ನಡೆಯಲೊಲ್ಲೆ...

---

**ನವಿರು-ನೋವು ನವಿಲಿಲ್ಲ... ನೀನಿಲ್ಲದೆ !!**

ನೆನಪು ನೋವೆಂಬರು

ನೋವು ನವಿರೆಂಬರು

ನವಿಲಗರಿಯೆಂಬರು ನೆಪಮಾತ್ರಕೆ

ನೆನಪಿನೋಣಿಯಲೊಮ್ಮೆ

ನಡೆದಾಡಿ ನೋಡಿದೆ

ನವಿರು-ನೋವು ನವಿಲಿಲ್ಲ... ನೀನಿಲ್ಲದೆ !!

---

ನಿನ್ನಾಗಮನ

ನನಗರಿವಿರದೇ ಆಯ್ತು

ಸುಳಿವು

ಗೊತ್ತೇ ಆಗದಂತೆ

ನನ್ನ ಮನವ

ಸೆಳೆದಿಟ್ಟುಕೊಂಡಿದ್ದೂ ಆಯ್ತು

ಒಲವು

ಗುಪ್ತ ಗಾಮಿಯಂತೆ

ನಿಷ್ಕ್ರಮಣವು

ಮಹಾಪ್ರಸ್ಥಾನವೇ ಆಯ್ತು

ಹರಿವು

ದಿಕ್ಕು ಬದಲಿಸಿದಂತೆ

ನನ್ನ ಬದುಕ

ದಿಕ್ಕೇ-ಬದಲಾಗಿ ಹೋಯ್ತು

ನೆರೆದ

ಆಪ್ತ ನೆನಪ ಸಂತೆ

ಇಂದೂ ನಾನಿರುವೆ

ಇದ್ದೂ ಇರದ ನೆರಳಂತೆ

ಸ್ಮೃತಿಯಲಿ

ಸಂಗತ ಭೂತದ

ಪಳೆಯುಳಿಕೆಯಾಗಿ

ಮುಂದೂ ನೀನಿರುವೆ

ಮಾಯಲಾರದ ಗಾಯದಂತೆ

ವಿಸ್ಮೃತಿಯಲಿ

ಅಸಂಗತ ಭವಿಷ್ಯದ

ಕನವರಿಕೆಯಾಗಿ…ನೆನವರಿಕೆಯಾಗಿ

---

‘ಕಡ್ಡಿಪುಡಿ’ಯ ‘ಬೇರೇ...ಯಾರೋ...ಬರೆದಂತಿದೆ...ಸಾಲನೂ’ ಧಾಟಿಯಲಿ ನನ್ನ ‘ಸೋಲೋ’ ಸಾಲು :-)

ಜೀವಾ... ಭಾವಾ...
ನೆನೆದಂತಿದೆ...
ನಿನ್ನನೇ

ಗಾನಾ... ತಾನಾ...
ಗುನುಗುತ್ತಿಹೆ...
ಸುಮ್ಮನೇ

ಬೆಸೆದ ತಂತುವೇ...
ಮಿಡಿವ ಕಂಪನ...
ಅನುರಣನ...
ಅನು..ದಿನಾ

ನಿನ ಗುಂಗಲೇ...
ನಾಸ್ತಿ ನಾ
ನಿನ ಗುಂಗಲೇ...
ನಾಸ್ತಿ ನಾ

ಜೀವಾ... ಭಾವಾ...

ಕಣ್ಣಲೇ...
ಕುಂತಿಹೆ...
ಕಣ್ ತುಂಬಿಬಂತೇ...

ಕಲ್ಪನಾ...
ತಲ್ಪದಿ...
ಸ್ಪರ್ಶವಾಗದಂತೆ...

ಏಕಾಯಿತೇ...
ಈ ಅಂತರ...
ನಂಬಲ್ಲ ನಾ...ನು
ಜನ್ಮಾಂತರ...

ಕಣ್ಣಲ್ಲೇ ಇದ್ದರೂ...
ಕಣ್ಣೆವೆ ತೋಯದೆ...
ನಾನಗುವೆ...
ಭಾಷೆ..ತಗೋ...

ಅಳು ನುಂಗಿಹೆ...
ಬಿಕ್ಕದೇ
ಅಳು ನುಂಗಿಹೆ...
ಬಿಕ್ಕದೇ

ಜೀವಾ... ಭಾವಾ...
ನೆನೆದಂತಿದೆ...
ನಿನ್ನನೇ
ಗುನುಗುತ್ತಿಹೆ...
ಸುಮ್ಮನೇ

**ಮೂಲ ಹಾಡು 'ಕಡ್ಡಿಪುಡಿ' ಚಿತ್ರದ 'ಬೇರೇ... ಯಾರೋ... ಬರೆದಂತಿದೆ... ಸಾಲನೂ'** **ಕೃಪೆ:** kannadalyrics.com

ಬೇರೇ... ಯಾರೋ...
ಬರೆದಂತಿದೆ...
ಸಾಲನು

ಬೀಸೋ... ಗಾಳಿ...
ಮರೆತಂತಿದೆ...
ಮಾತನು

ಬೆಲ್ಲದ ಹಾಗೆಯೂ...
ಕಲ್ಲೆದೆ ಕರಗುವಾ...
ಬೇಗುದಿಯೂ...
ಇದೇ..ತಕೋ

ತಡೆದಂತಿದೆ...
ನಿನ್ನನು
ತಡೆದಂತಿದೆ...
ನಿನ್ನನು

ಬೇರೇ... ಯಾರೋ...

ಜೀವವೇ...
ಪ್ರೀತಿಸು...
ಜೀವ ಹೋಗುವಂತೇ...

ಸಂತೆಯಾ...
ಮಧ್ಯವೇ...
ಸ್ವಪ್ನ ತಾಗುವಂತೆ...

ನಮ್ಮಿಬ್ಬರಾ...
ರೂಪಾಂತರ...
ಆಗಾಗ ಸ...ಣ್ಣಾ...
ಮಧ್ಯಂತರ...

ಕನ್ನಡಿಯಲ್ಲಿಯೂ...
ಕಣ್ಣಿಗೆ ಬೀಳದ...
ಭೂಮಿಕೆಯೂ...
ಇದೇ..ತಕೋ....

ಸೆಳೆದಂತಿದೆ...
ನಿನ್ನನು
ಸೆಳೆದಂತಿದೆ...
ನಿನ್ನನು

ಬೇರೇ... ಯಾರೋ...
ಬರೆದಂತಿದೆ...
ಸಾಲನು
ಮರೆತಂತಿದೆ...
ಮಾತನು

ಪದಗಳಲ್ಲಿಯೂ... ಬಂಧಿಸಲಾಗದ... ಕನ್ನಿಕೆಯೇ... ಇಗೋ..ತಗೋ...(ಕಡ್ಡಿಪುಡಿ ಚಿತ್ರದ 'ಬೇರೆ ಯಾರೋ...ಬರದಂತಿದೆ' ಧಾಟಿಯಲ್ಲಿ ನನ್ನ ಸಾಲುಗಳು)

ಏಕೋ... ಏನೋ...
ಸ್ಮರಿಸುತ್ತಿಹೆ ...
ನಿನ್ನನು

ವರ್ಷ... ಸ್ಪರ್ಷ...
ಹನಿಸುತ್ತಿದೆ...
ಕಣ್ಣನು

ಮೊಲ್ಲೆಯ ಹೂವೊಂದು...
ಮೆಲ್ಲನೆ ಅರಳುತಾ...
ನರುಗಂಪು...
ಬೀರೋ.. ತರಾ

ಆವರಿಸುತಿಹೆ...
ನನ್ನನು
ನಾ ಮರೆತಿಹೆ ...
ನನ್ನನೇ

ಏಕೋ... ಏನೋ...

ಯಾವುದೋ...
ಹಾಡಲೀ...
ಲೀನ ಆಗುವಂತೆ...

ಸೇರಿದೇ ...
ನನ್ನೆದೇ...
ಗೊತ್ತೇ ಆಗದಂತೇ...

ನಿನೊಂತರಾ...
ಸೋನೆ ತರಾ...
ಬಂದ್ಹೋಗು ಇಲ್ಲಾ...
ಅಭ್ಯಂತರ...

ಪದಗಳಲ್ಲಿಯೂ...
ಬಂಧಿಸಲಾಗದ...
ಕನ್ನಿಕೆಯೇ...
ಇಗೋ..ತಗೋ....

ಸೆರೆಯಾಗುವೆ ...
ನಿಂಗೇ ನಾ
ಮರೆಯಾಗುವೆ ...
ಹಿಂಗೇ ನಾ

ಏಕೋ... ಏನೋ...
ಸ್ಮರಿಸುತ್ತಿಹೆ ...
ನಿನ್ನನು
ಹನಿಸುತ್ತಿದೆ...
ಕಣ್ಣನು

**ಮೂಲ ಹಾಡು: 'ಕಡ್ಡಿಪುಡಿ' ಚಿತ್ರದ 'ಬೇರೇ... ಯಾರೋ... ಬರೆದಂತಿದೆ... ಸಾಲನೂ' ಕೃಪೆ:** kannadalyrics.com

ಬೇರೇ... ಯಾರೋ...
ಬರೆದಂತಿದೆ...
ಸಾಲನು

ಬೀಸೋ... ಗಾಳಿ...
ಮರೆತಂತಿದೆ...
ಮಾತನು

ಬೆಲ್ಲದ ಹಾಗೆಯೂ...
ಕಲ್ಲೆದೆ ಕರಗುವಾ...
ಬೇಗುದಿಯೂ...
ಇದೇ..ತಕೋ

ತಡೆದಂತಿದೆ...
ನಿನ್ನನು
ತಡೆದಂತಿದೆ...
ನಿನ್ನನು

ಬೇರೇ... ಯಾರೋ...

ಜೀವವೇ...
ಪ್ರೀತಿಸು...
ಜೀವ ಹೋಗುವಂತೇ...

ಸಂತೆಯಾ...
ಮಧ್ಯವೇ...
ಸ್ವಪ್ನ ತಾಗುವಂತೆ...

ನಮ್ಮಿಬ್ಬರಾ...
ರೂಪಾಂತರ...
ಆಗಾಗ ಸ...ಣ್ಣಾ...
ಮಧ್ಯಂತರ...

ಕನ್ನಡಿಯಲ್ಲಿಯೂ...
ಕಣ್ಣಿಗೆ ಬೀಳದ...
ಭೂಮಿಕೆಯೂ...
ಇದೇ..ತಕೋ....

ಸೆಳೆದಂತಿದೆ...
ನಿನ್ನನು
ಸೆಳೆದಂತಿದೆ...
ನಿನ್ನನು

ಬೇರೇ... ಯಾರೋ...
ಬರೆದಂತಿದೆ...
ಸಾಲನು
ಮರೆತಂತಿದೆ...
ಮಾತನು